# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಆಗಸ್ಟ್ 03, 2024

ಸಂಪುಟ : 51 ಸಂಚಿಕೆ : 81 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

**ಜೀವನಾಡಿ ...** ಭದ್ರಾ ಜಲಾಶಯದ ರಮಣೀಯ ದೃಶ್ಯವಿದು. ಪ್ರಸಕ್ತ ವರ್ಷ ಅತಿ ವೇಗವಾಗಿ ಭರ್ತಿಯಾಗಿರುವ ಈ ಜಲಾಶಯದಿಂದ ನೀರನ್ನು ಹೊರ ಬಿಡಲಾಗಿದೆ. ಪ್ರತಿ ದಿನ ಸಾವಿರಾರು ಜನರು ಜಲಾಶಯ ವೀಕ್ಷಣೆಗೆ ಆಗಮಿಸುತ್ತಿದ್ದಾರೆ.

# ಅರಣ್ಯ ಒತ್ತುವರಿ ತೆರವಿಗೆ ಸುತ್ತೋಲೆ

## ಒತ್ತುವರಿಯ ಬಡಾವಣೆ, ತೋಟ, ಹೋಂ ಸ್ಟೇ, ರೆಸಾರ್ಟ್‌ಗಳ ವಿರುದ್ಧ ಕ್ರಮ

ಬೆಂಗಳೂರು, ಆ. 2 - ಪಶ್ಚಿಮ ಘಟ್ಟದಲ್ಲಿ 2015 ರಿಂದೀಚೆಗೆ ಆಗಿರುವ ಎಲ್ಲ ಅರಣ್ಯ ಒತ್ತುವರಿ ತೆರವುಗೊಳಿಸಲು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸುತ್ತೋಲೆ ಹೊರಡಿಸಿದ್ದಾರೆ.

ಪಶ್ಚಿಮ ಘಟ್ಟದ ಎಲ್ಲ ಗಿರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಮತ್ತು ಅರಣ್ಯ ಪ್ರದೇಶ ಒತ್ತುವರಿ ಮಾಡಿ ನಿರ್ಮಿಸಲಾಗಿರುವ ಬಡಾವಣೆ, ತೋಟ, ಹೋಂ ಸ್ಟೇ ಮತ್ತು ರೆಸಾರ್ಟ್ ಗಳ ವಿರುದ್ಧ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ಶಿರೂರು, ವಯನಾಡ್ ಭೂಕುಸಿತ ರಾಜ್ಯಕ್ಕೆ ಎಚ್ಚರಿಕೆ ಗಂಟೆ ಆಗಿದ್ದು, ಪಶ್ಚಿಮ ಘಟ್ಟದ ಉಳಿವಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದು ಖಂಡ್ರೆ ಹೇಳಿದ್ದಾರೆ.

ರಾಜ್ಯದ ಶಿರೂರು ಬಳಿ ಸಂಭವಿಸಿದ ಗುಡ್ಡ ಕುಸಿತದಲ್ಲಿ 11 ಮಂದಿ ಬಲಿಯಾಗಿದ್ದಾರೆ. ನೆರೆ ರಾಜ್ಯ ಕೇರಳದ ವಯನಾಡಿನಲ್ಲಿ ಸಂಭವಿಸಿರುವ ಗುಡ್ಡ ಕುಸಿತದಲ್ಲಿ 250 ಮುಗ್ಧ ಜನರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಜನರು ಕಣ್ಮರೆಯಾಗಿರುವುದು ಅತ್ಯಂತ ನೋವಿನ ಸಂಗತಿ. ಈ ದುರಂತಗಳು ನಮಗೂ ಎಚ್ಚರಿಕೆಯ ಗಂಟೆಯಾಗಿವೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಗಿರಿ ಮತ್ತು ಘಟ್ಟ ಪ್ರದೇಶದಲ್ಲಿ ವಿಪರೀತವಾಗಿ ವಾಹನಗಳ ಸಂಚಾರದಿಂದಲೂ ಅಪಾಯ ಎದುರಾಗುತ್ತಿದೆ. ವಾರಾಂತ್ಯದಲ್ಲಿ ಪ್ರವಾಸ, ಚಾರಣದ ಹೆಸರಲ್ಲಿ ಗಿರಿ ಮತ್ತು ಕಾನನ ಪ್ರದೇಶಕ್ಕೆ ಸಾವಿರಾರು ಸಂಖ್ಯೆಯಲ್ಲಿ ಜನರು ಬರುವುದೂ ಇಂತಹ ದುರಂತಗಳಿಗೆ ಪೂರಕವಾಗಿದೆ.

ಸ್ವಾಭಾವಿಕ, ಪ್ರಕೃತಿ ದತ್ತವಾದ ಪಶ್ಚಿಮ ಘಟ್ಟದ ಗುಡ್ಡಗಳು ಮತ್ತು ಶೋಲಾ ಅರಣ್ಯಗಳ ತಲೆ ಕಡಿದು ಕಾಫಿ ತೋಟ, ಮನೆ, ಹೋಂಸ್ಟೇ, ರೆಸಾರ್ಟ್ ಮಾಡುತ್ತಿರುವುದರಿಂದ ಹಾಗೂ ಬೇರಿನಿಂದ ಗಟ್ಟಿಯಾಗಿ ಮಣ್ಣು ಹಿಡಿದಿಡುವ ಬೃಹತ್ ಮರಗಳ ಕಡಿತಲೆ, ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿ ನಿರ್ಮಿಸುವ ರಸ್ತೆಗಳಿಂದ ಇಂತಹ ದುರಂತ ಮರುಕಳಿಸುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಸಚಿವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ಚಾಮರಾಜಗರ, ಬೆಳಗಾವಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಹಾಸನ ಸೇರಿದಂತೆ ರಾಜ್ಯದ ಪಶ್ಚಿಮಘಟ್ಟದಲ್ಲಿ 2015ರಿಂದ ಈಚೆಗೆ ಪಶ್ಚಿಮ ಘಟ್ಟದ ಎಲ್ಲ ಗಿರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಮತ್ತು ಅರಣ್ಯ ಪ್ರದೇಶ ಒತ್ತುವರಿ ಮಾಡಿ ನಿರ್ಮಿಸಲಾಗಿರುವ ಬಡಾವಣೆ, ತೋಟ, ಹೋಂ ಸ್ಟೇ ಮತ್ತು ರೆಸಾರ್ಟ್‌ಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲು ಹಾಗೂ 1 ತಿಂಗಳೊಳಗೆ ಕೈಗೊಂಡ ಕ್ರಮದ ವಿವರದೊಂದಿಗೆ ಕಡತದಲ್ಲಿ ವರದಿ ಸಲ್ಲಿಸುವಂತೆ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಸಚಿವ ಖಂಡ್ರೆ ಸೂಚನೆ ನೀಡಿದ್ದಾರೆ.

# ಅನುದಾನ ಕಡಿಮೆ, ಆರೋಗ್ಯ ಕಡೆಗಣನೆ

## ಸಂಸತ್ತಿನಲ್ಲಿ ಡಾ. ಪ್ರಭಾ ಮೊದಲ ಭಾಷಣ, ಕೇಂದ್ರ ಬಜೆಟ್ ಕುರಿತು ತರಾಟೆ

ನವದೆಹಲಿ, ಆ. 2 – ಅಮೆರಿಕದಲ್ಲಿ ಆರೋಗ್ಯ ವಲಯಕ್ಕೆ ಜಿ.ಡಿ.ಪಿ.ಯ ಶೇ.17.9ರಷ್ಟು ಅನುದಾನ ನೀಡಲಾಗುತ್ತಿದೆ. ಭಾರತದಲ್ಲಿ ಶೇ.2.5ರ ಗುರಿ ಸಹ ತಲುಪಲು ಸಾಧ್ಯವಾಗುತ್ತಿಲ್ಲ. ಈ ರೀತಿ ವಿಶ್ವ ಗುರು ಆಗಲು ಸಾಧ್ಯವೇ? ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಲೋಕಸಭೆಯಲ್ಲಿ ಪ್ರಶ್ನಿಸಿದ್ದಾರೆ.

18ನೇ ಲೋಕಸಭೆಯಲ್ಲಿ ಮೊದಲ ಬಾರಿ ಮಾತನಾಡಿದ ಪ್ರಭಾ ಮಲ್ಲಿಕಾರ್ಜುನ್, ಬಜೆಟ್‌ನಲ್ಲಿ ಆರೋಗ್ಯ ವಲಯವನ್ನು ಕಡೆಗಣಿಸಲಾಗಿದ್ದು, ಕಡಿಮೆ ಅನುದಾನ ನೀಡಲಾಗಿದೆ ಎಂದು ವಿಷಾದಿಸಿದರು.

ಬ್ರೆಜಿಲ್‌ನಲ್ಲಿ ಆರೋಗ್ಯ ವಲಯಕ್ಕೆ ಜಿ.ಡಿ.ಪಿ.ಯ ಶೇ.10ರಷ್ಟು ಹಣ ಸಿಗುತ್ತಿದೆ. ನೆರೆಯ ಚೀನಾದಲ್ಲೂ ಶೇ.6.6ರಷ್ಟು ಸಿಗುತ್ತಿದೆ. ಆದರೆ,



ಕೇಂದ್ರ ಸರ್ಕಾರ ತಾನೇ ಶೇ.2.5ರ ಗುರಿ ಹೊಂದಿದ್ದರೂ, ಈ ಬಾರಿ ಶೇ.2.1ರಷ್ಟು ಮಾತ್ರ ಸಿಗುತ್ತಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಭಾರತದಲ್ಲಿ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚಾಗುತ್ತಿದೆ. ಶಿಶು ಮರಣ ತಗ್ಗಿಸುವ ಗುರಿ ತಲುಪಲು ಆಗುತ್ತಿಲ್ಲ. ಕೇಂದ್ರ ಸರ್ಕಾರ ಸರ್ವೈಕಲ್ ಕ್ಯಾನ್ಸರ್‌ಗೆ ಲಸಿಕೆ (2ನೇ ಪುಟಕ್ಕೆ)

### ಕನ್ನಡದಲ್ಲಿ ಮಾತು ಆರಂಭ, ದಾವಣಗೆರೆ ಜನತೆಗೆ ಕೃತಜ್ಞತೆ

**ತಮ್ಮ ಭಾಷಣವನ್ನು ಕನ್ನಡದಲ್ಲಿ ಆರಂಭಿಸಿದ ಸಂಸದೆ ಪ್ರಭಾ ಮಲ್ಲಿಕಾರ್ಜುನ್, 'ನಮ್ಮ ದಾವಣಗೆರೆ ಲೋಕಸಭಾ ಕ್ಷೇತ್ರದ ಎಲ್ಲ ಮತ ಬಾಂಧವರಿಗೆ ನನ್ನ ಆತ್ಮೀಯ ಕೃತಜ್ಞತೆಗಳು' ಎಂದು ಹೇಳಿದರು.**

**ನಂತರ ಆರೋಗ್ಯ ವಲಯದ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ, ಕಡಿಮೆ ಅನುದಾನ, ಆರೋಗ್ಯ ವಲಯದ ಕಡೆಗಣನೆ, ಕೇವಲ ಅಲಂಕಾರಿಕ ಕ್ರಮಗಳು, ದೂರದೃಷ್ಟಿ ಯೋಜನೆಗಳ ಕೊರತೆ, ಶ್ರಮಿಕ ವರ್ಗದವರಿಗೆ ಆರೋಗ್ಯ ಸಮಸ್ಯೆಯಿಂದ ಆಗುವ ಆರ್ಥಿಕ ಹೊರೆ ಮುಂತಾದ ವಿಷಯಗಳ ಬಗ್ಗೆ ಮಾತನಾಡಿದರು. ಕೊನೆಯದಾಗಿ, ಹಲ್ವಾ ಬಗ್ಗೆ ಗೊತ್ತಿಲ್ಲ. ಆದರೆ, ಕರ್ನಾಟಕದ** (2ನೇ ಪುಟಕ್ಕೆ)

# ಇಂದಿನಿಂದ 'ಮೈಸೂರು ಚಲೋ' ಪಾದಯಾತ್ರೆ

**ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಗಳನ್ನು ಜನರಿಗೆ ತಿಳಿಸಲು ಎನ್‌ಡಿಎ ಮೈತ್ರಿಕೂಟದಿಂದ ಪಾದಯಾತ್ರೆ**

**ಮೈಸೂರಿಗೆ 8 ದಿನಗಳಲ್ಲಿ ಕ್ರಮಿಸಲಿರುವ ಯಾತ್ರೆ**

ಬೆಂಗಳೂರು, ಆ. 2 - ಮುಖ್ಯಮಂತ್ರಿ ಸಿದ್ದರಾಮಯ್ಯ ಅಕ್ರಮವಾಗಿ ತಮ್ಮ ಕುಟುಂಬದವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ನಿವೇಶನ ಪಡೆದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಕ್ರಮಕ್ಕೆ ಮುಂದಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಮತ್ತು ಜೆಡಿಎಸ್ ನಾಳೆಯಿಂದ (ಆಗಸ್ಟ್ 3) ಮೈಸೂರು ಚಲೋ ಪಾದಯಾತ್ರೆ ಹಮ್ಮಿಕೊಂಡಿದೆ.

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಗಳನ್ನು ಜನರಿಗೆ ತಿಳಿಸಲು ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ಬೆಂಗಳೂರಿನಿಂದ ಮೈಸೂರಿಗೆ ಒಂದು ವಾರ ಕಾಲ ಪಾದಯಾತ್ರೆ ನಡೆಸುತ್ತಿವೆ.

ನಗರದ ಹೊರವಲಯದ ಕೆಂಗೇರಿ ಸಮೀಪದಿಂದ ಪಾದಯಾತ್ರೆ ಆರಂಭಗೊಳ್ಳಲಿದ್ದು, ಮಾಜಿ ಮುಖ್ಯಮಂತ್ರಿ (3ನೇ ಪುಟಕ್ಕೆ)

### ಪಾದಯಾತ್ರೆಗೆ ಅನುಮತಿ

ಬೆಂಗಳೂರು, ಆ. 2 - ಬಿಜೆಪಿ ಮತ್ತು ಜೆಡಿಎಸ್ ನಾಳೆ (ಆಗಸ್ಟ್ 3) ಹಮ್ಮಿಕೊಂಡಿರುವ 'ಮೈಸೂರು ಚಲೋ' ಪಾದಯಾತ್ರೆಗೆ ಅನುಮತಿ ಕೊಡಲು ನಿರ್ಧರಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಂತಿಯುತವಾಗಿ ಪಾದಯಾತ್ರೆ ಮಾಡುತ್ತೇವೆ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಪಾದಯಾತ್ರೆಗೆ ಅನುಮತಿ ಕೊಡಲು ಸರ್ಕಾರ ನಿರ್ಧರಿಸಿದೆ ಎಂದರು.

ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ ಹೋರಾಟವನ್ನು ಮತ್ತಷ್ಟು ದೊಡ್ಡಮಟ್ಟಕ್ಕೆ (3ನೇ ಪುಟಕ್ಕೆ)

# ಆಸ್ತಿ ತೆರಿಗೆ ಸುಸ್ತಿದಾರರ ಒಟಿಎಸ್ ಕಾಲಾವಧಿ 31ರವರೆಗೆ ವಿಸ್ತರಣೆ

ಬೆಂಗಳೂರು, ಆ. 2 - ಆಸ್ತಿ ತೆರಿಗೆ ಸುಸ್ತಿದಾರರಿಗಾಗಿ ಜಾರಿಗೆ ತರಲಾಗಿದ್ದ 'ಒಂದು ಬಾರಿ ಪರಿಹಾರ ಯೋಜನೆ' (ಒಟಿಎಸ್) ಕಾಲಾವಧಿ ಯನ್ನು ಸಾರ್ವಜನಿಕರ ಒತ್ತಡದ ಮೇರೆಗೆ ಆಗಸ್ಟ್ 31ರವರೆಗೆ ವಿಸ್ತರಿಸಲಾಗಿದೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಈ ಮೊದಲು ನೀಡಿದ್ದ ಒಂದು ಬಾರಿ ಪರಿಹಾರ ಯೋಜನೆ ಕಾಲಾವಧಿ ಜುಲೈ 31ಕ್ಕೆ ಕೊನೆಗೊಂಡಿದೆ ಎಂದರು. ಈವರೆಗೂ 3 ಸಾವಿರ ಕೋಟಿ ರೂ.ನಷ್ಟು ಆಸ್ತಿ ತೆರಿಗೆ ಸಂಗ್ರಹವಾಗಿದ್ದು, 400 ಕೋಟಿ ರೂ. ಹೆಚ್ಚುವರಿ ತೆರಿಗೆ ಸಂಗ್ರಹವಾಗಿದೆ. ಒಟಿಎಸ್ ಕಾಲಾವಧಿ 1 ತಿಂಗಳು ವಿಸ್ತರಣೆಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರಿಂದ ಒತ್ತಡ ಬರುತ್ತಿದೆ, ಸರ್ವರ್ ಸಮಸ್ಯೆ ಇತ್ತು ಹಾಗೂ ಕೆಲವರು ಚೆಕ್ ನೀಡಿದ್ದರು.

ಪ್ರಾಮಾಣಿಕವಾಗಿ ತೆರಿಗೆ ಪಾವತಿ ಮಾಡುವವರಿಗೆ (4ನೇ ಪುಟಕ್ಕೆ)

# ಕಸ್ತೂರಿ ರಂಗನ್ ವರದಿ ತಿರಸ್ಕಾರ

ಮಡಿಕೇರಿ, ಆ. 2 - ಪಶ್ಚಿಮ ಘಟ್ಟಗಳ ಕುರಿತು ಕಸ್ತೂರಿರಂಗನ್ ನೀಡಿರುವ ವರದಿಯನ್ನು ತಿರಸ್ಕರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಜೊತೆ ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕರ್ನಾಟಕದ 21,000 ಚದುರ ಕಿಲೋಮೀಟರ್ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಘೋಷಿಸಬೇಕು ಎಂದು ಕಸ್ತೂರಿ ರಂಗನ್ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿತ್ತು. ವರದಿ ಜಾರಿಗೆ (2ನೇ ಪುಟಕ್ಕೆ)

# ಪಾಲಿಕೆಗೆ ಸುರಭಿ ಶಿವಮೂರ್ತಿ ಸೇರಿ ಐವರು ಸದಸ್ಯರಾಗಿ ನೇಮಕ



ದಾವಣಗೆರೆ, ಆ.2- ದಾವಣಗೆರೆ ಮಹಾನಗರ ಪಾಲಿಕೆಗೆ ಅಧಿಕಾರೇತರ ಸದಸ್ಯರನ್ನಾಗಿ ಐವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದ್ದು, ಈ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ. ನಾಗೇಶ್ ಇಂದು ಆದೇಶ ಹೊರಡಿಸಿದ್ದಾರೆ.

ಸಾಮಾಜಿಕ ಸಂಘಟನೆಗಳ ಪ್ರಮುಖರಲ್ಲೊಬ್ಬರಾದ ಎಸ್. ಶಿವಮೂರ್ತಿ ಸುರಭಿ, ಗಾಂಧಿನಗರದ ಎಲ್.ಹೆಚ್. ಸಾಗರ್, ಶಾಮನೂರಿನ ಕೆ.ಬಿ. ರುದ್ರೇಶ್, ಬೇತೂರು ರಸ್ತೆಯ ಶ್ರೀಮತಿ ಶಾಹೀನಾ ಬಾನು ಕೋಂ ಇಬ್ರಾಹಿಂ ಖಲೀವುಲ್ಲಾ ಮತ್ತು ಭಗತ್ ಸಿಂಗ್ ನಗರದ ಎಸ್.ಪಿ. ಹನುಮಂತರಾಜ್ ಅವರುಗಳು ಪಾಲಿಕೆ ಸದಸ್ಯರುಗಳಾಗಿ ನೇಮಕಗೊಂಡಿದ್ದಾರೆ.

ಪಾಲಿಕೆಗೆ ಅಧಿಕಾರೇತರ ಸದಸ್ಯರಾಗಿ (6ನೇ ಪುಟಕ್ಕೆ)


॥ಶ್ರೀ ವೆಂಕಟೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ವಾಸಿಗಳಾದ
ಶ್ರೀ ಜಿ. ಮಂಜುನಾಥ್, ಪ್ರಾಂಶುಪಾಲರು,
ಡಾ॥ ಜಿ. ನಾಗರಾಜ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 30.07.2024ನೇ ಮಂಗಳವಾರ
ಬೆಳಿಗ್ಗೆ 10.50ಕ್ಕೆ ನಮ್ಮ ಅಣ್ಣನವರಾದ
**ಶ್ರೀ ಜಿ. ವಿಶ್ವನಾಥ್**
ಇಂಜಿನಿಯರ್, ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 03.08.2024ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸದ್ಯೋಜಾತ ಹಿರೇಮಠ, ಎಂಸಿಸಿ "ಬಿ" ಬ್ಲಾಕ್, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕೆಂದು ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಜ್ಯೋತಿ ಶ್ರೀ ಅಶೋಕ್ ಪಾಟೀಲ್ ಮತ್ತು ಶ್ರೀ ಶರಣ್ ಪಾಟೀಲ್, ಶ್ರೀಮತಿ ಸುಧಾ ಶ್ರೀ ಜಿ. ಮಂಜುನಾಥ್, ಶ್ರೀಮತಿ ಸಾವಿತ್ರಿ ಜಿ. ನಾಗರಾಜ್, ಶ್ರೀಮತಿ ನಿರ್ಮಲ ಮುನಿಯಪ್ಪ & ಮಕ್ಕಳು, ಹುಬ್ಬಳ್ಳಿ. ಶ್ರೀಮತಿ ಪ್ರೇಮಾ ಮಲ್ಲಿಕಾರ್ಜುನ್ ಪ್ರಸನ್ನ ಮತ್ತು ಮಕ್ಕಳು, ಬೀರೂರು. ಶ್ರೀ ಜಿ. ಸದಾಶಿವಪ್ಪ, ಕತ್ತಲಗೆರೆ, ಗೌಡ್ರ ವಂಶಸ್ಥರು, ದೊಗ್ಗನಾಳ್. ಲಿಂಗ್ಲಾಪುರ ವಂಶಸ್ಥರು, ಬೀರೂರು ಹಾಗೂ ಬಂಧು-ಮಿತ್ರರು. ಫೋ.: 9844045606, 9886215111

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# 7.28 ಕೋಟಿ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ

ನವದೆಹಲಿ, ಆ. 2- ಕಳೆದ ಜುಲೈ 30ರಂದು ಅಂತ್ಯವಾದ ಗಡುವಿನ ಒಳಗೆ 7.28 ಕೋಟಿ ಆದಾಯ ತೆರಿಗೆ ರಿಟರ್ನ್‌ಗಳನ್ನು ದಾಖಲಿಸ ಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಕಳೆದ ವರ್ಷ 6.77 ಕೋಟಿ ಆದಾಯ ತೆರಿಗೆ ರಿಟರ್ನ್ ದಾಖಲಿಸಲಾಗಿತ್ತು. ಈ ವರ್ಷ ದಾಖಲಿಸಿರುವ 7.28 ಕೋಟಿ ರಿಟರ್ನ್‌ಗಳ ಪೈಕಿ 5.27 ಕೋಟಿ ಹೊಸ ಆದಾಯ ತೆರಿಗೆ ಪದ್ಧತಿಗೆ ಸೇರಿದವು. 2.01 ಕೋಟಿ ಹಳೆಯ ತೆರಿಗೆ ಪದ್ಧತಿಯವು ಎಂದು ಆದಾಯ ತೆರಿಗೆ ಇಲಾಖೆ ಹೇಳಿಕೆಯಲ್ಲಿ ತಿಳಿಸಲಾಗಿದೆ.







### ಕರ್ನಾಟಕದ 20 ಸಾವಿರ ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ :

# ಪಶ್ಚಿಮ ಘಟ್ಟಗಳ ರಕ್ಷಣೆಗಾಗಿ ಕೇಂದ್ರದಿಂದ ಕರಡು ಅಧಿಸೂಚನೆ

ನವದೆಹಲಿ, ಆ. 2 - ಪಶ್ಚಿಮ ಘಟ್ಟಗಳ 56,800 ಚದುರ ಕಿಲೋಮೀಟರ್ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಹೊಸ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ಬಗ್ಗೆ 60 ದಿನಗಳಲ್ಲಿ ಸಲಹೆ ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ಭೂಕುಸಿತ ಸಂಭವಿಸಿರುವ ಕೇರಳದ ವಯನಾಡ್‌ನಲ್ಲಿರುವ 13 ಹಳ್ಳಿಗಳು ಈ ಕರಡು ಅಧಿಸೂಚನೆ ವ್ಯಾಪ್ತಿಯಲ್ಲಿವೆ. ಭೂಕುಸಿತ ಸಂಭವಿಸಿದ ಬೆನ್ನಲ್ಲೇ ಅಧಿಸೂಚನೆ ಹೊರಡಿಸಲಾಗಿದೆ.

ಅರಣ್ಯನಾಶ, ಗಣಿಗಾರಿಕೆ ಹಾಗೂ ಪರಿಸರ ಬದಲಾವಣೆ ಕಾರಣದಿಂದಾಗಿ ಈ ವಿಕೋಪ ಸಂಭವಿಸಿದೆ ಎಂದು ವಿಜ್ಞಾನಿಗಳು ತಿಳಿಸಿದರು. ಕೇಂದ್ರ ಸರ್ಕಾರದ ಅಧಿಸೂಚನೆಯಲ್ಲಿ ಆರು ರಾಜ್ಯಗಳ ಪ್ರದೇಶಗಳು ಸೇರಿವೆ. ಇದರಲ್ಲಿ ಅತಿ ಹೆಚ್ಚಿನ ಪ್ರದೇಶ ಕರ್ನಾಟಕದ್ದಾಗಿದ್ದು, 20,668 ಚದುರ ಕಿಲೋಮೀಟರ್ ಪ್ರದೇಶವನ್ನು ಪರಿಸರ ಸೂಕ್ಷ್ಮ ಎಂದು ಘೋಷಿಸಲು ಪ್ರಸ್ತಾಪಿಸಲಾಗಿದೆ.

ಹೊಸ ಕರಡು ಅಧಿಸೂಚನೆಯಲ್ಲಿ ಒಟ್ಟಾರೆ ಪ್ರದೇಶದಲ್ಲಿ ಹೆಚ್ಚೇನು ಬದಲಾವಣೆ ಆಗಿಲ್ಲ. ಈ ಬಾರಿ ಅಂತಿಮ ಅಧಿಸೂಚನೆ ಹೊರಡಿಸುವ ಆಶಯ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕವಷ್ಟೇ ಅಲ್ಲದೆ ಗುಜರಾತ್‌ನ 449 ಚದುರ ಕಿ.ಮೀ., ಮಹಾರಾಷ್ಟ್ರದ 17,340, ಗೋವಾದ 1,461, ತಮಿಳುನಾಡಿನ 6,914 ಹಾಗೂ ಕೇರಳದ 9,993.7 ಚದುರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ.

ಪರಿಸರ ಸೂಕ್ಷ್ಮ ವಲಯ ಘೋಷಣೆಗಾಗಿ 2014ರ ನಂತರ ಸರ್ಕಾರ ಆರು ಕರಡು ಅಧಿಸೂಚನೆಗಳನ್ನು ಪ್ರಕಟಿಸಿದೆ. ಆದರೆ ರಾಜ್ಯಗಳ ಆಕ್ಷೇಪದ ಕಾರಣದಿಂದಾಗಿ ಅಂತಿಮ ಅಧಿಸೂಚನೆ ಪ್ರಕಟಿಸಲು ಸಾಧ್ಯವಾಗಿಲ್ಲ.

2022ರ ಏಪ್ರಿಲ್ ತಿಂಗಳಲ್ಲಿ ಪರಿಣಿತರ ಸಮಿತಿಯೊಂದನ್ನು ರಚಿಸಲಾಗಿತ್ತು. ನಂತರ ಸಮಿತಿಯು 9 ಸಭೆಗಳನ್ನು ನಡೆಸಿ ರಾಜ್ಯಗಳ ಹಲವಾರು ಆಕ್ಷೇಪ ಹಾಗೂ ಸಲಹೆಗಳನ್ನು ಪರಿಶೀಲಿಸಿದೆ.

ಇಂದಿನ ಕರಡು ಅಧಿಸೂಚನೆಯಲ್ಲಿದ್ದ ತೊಡಕುಗಳನ್ನು ಸರಿಪಡಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಹಾಗೂ ಮರಳು ಗಣಿಗಾರಿಕೆಯ ಮೇಲೆ ಸಂಪೂರ್ಣ ನಿಷೇಧ ಹೇರಲು ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ. ಈಗಿರುವ ಗಣಿಗಳನ್ನೂ ಸಹ ಐದು ವರ್ಷಗಳಲ್ಲಿ ಸ್ಥಗಿತಗೊಳಿಸಬೇಕಿದೆ.

ಈ ವಲಯದಲ್ಲಿ ಹೊಸ ಶಾಖೋತ್ಪನ್ನ ವಿದ್ಯುತ್ ಘಟಕಗಳನ್ನು ಸ್ಥಾಪಿಸುವಂತಿಲ್ಲ. ಈಗಿರುವ ಘಟಕಗಳು ಕಾರ್ಯ ನಿರ್ವಹಿಸಬಹುದಾದರೂ, ವಿಸ್ತರಣೆ ಮಾಡುವಂತಿಲ್ಲ ಎಂದು ತಿಳಿಸಲಾಗಿದೆ.

ಅತಿ ಹೆಚ್ಚು ಮಾಲಿನ್ಯಕ್ಕೆ ಕಾರಣವಾಗುವ ಕೆಂಪು ವಲಯದ ಉದ್ಯಮಗಳ ಸ್ಥಾಪನೆ ಹಾಗೂ ಅವುಗಳ ವಿಸ್ತರಣೆಯನ್ನು ನಿಷೇಧಿಸಲಾಗುವುದು. ದೊಡ್ಡ ಪ್ರಮಾಣದ ನಿರ್ಮಾಣ ಯೋಜನೆಗಳು ಹಾಗೂ ಉಪನಗರಗಳ ನಿರ್ಮಾಣ ನಿಷೇಧಿಸಲಾಗುವುದು. ಈಗಿರುವ ಕಟ್ಟಡಗಳ ದುರಸ್ತಿ ಹಾಗೂ ನವೀಕರಣಕ್ಕೆ ಮಾತ್ರ ಅನುಮತಿ ನೀಡಲಾಗುವುದು.

2010ರಲ್ಲಿ ಸರ್ಕಾರ ಪರಿಸರ ತಜ್ಞ ಮಾಧವ್ ಗಾಡ್ಗಿಲ್ ಅವರ ನೇತೃತ್ವದ ಸಮಿತಿ ಒಂದನ್ನು ಸರ್ಕಾರ ರಚಿಸಿತ್ತು. ಇಡೀ ಪಶ್ಚಿಮ ಘಟ್ಟ ವಲಯವನ್ನು ಸೂಕ್ಷ್ಮ ಎಂದು ಘೋಷಿಸುವಂತೆ ಸಮಿತಿ ಶಿಫಾರಸ್ಸು ಮಾಡಿತ್ತು. ಆದರೆ, ರಾಜ್ಯಗಳು, ಕೈಗಾರಿಕೆಗಳು ಹಾಗೂ ಸ್ಥಳೀಯ ಸಮುದಾಯಗಳು ಶಿಫಾರಸುಗಳನ್ನು ವಿರೋಧಿಸಿದ್ದವು.

ನಂತರ ಕೇಂದ್ರ ಸರ್ಕಾರ 2013ರಲ್ಲಿ ಇಸ್ರೋ ವಿಜ್ಞಾನಿ ಕೆ. ಕಸ್ತೂರಿ ರಂಗನ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಹಂತದ ಸಮಿತಿಯನ್ನು ರಚಿಸಿ ಪಶ್ಚಿಮ ಘಟ್ಟಗಳ ರಕ್ಷಣೆ ಕುರಿತು ವರದಿ ನೀಡುವಂತೆ ತಿಳಿಸಿತ್ತು.

ಪಶ್ಚಿಮ ಘಟ್ಟಗಳ ಶೇಕಡ 37 ರಷ್ಟು ಭಾಗವನ್ನು ಪರಿಸರ ಸೂಕ್ಷ್ಮ ಎಂದು ಪರಿಗಣಿಸಬೇಕೆಂದು ಸಮಿತಿ ವರದಿ ನೀಡಿತ್ತು. ಇದು 59,940 ಚದುರ ಕಿಲೋ ಮೀಟರ್‌ನಷ್ಟಾಗುತ್ತದೆ.





# ಹರಿಹರ : ಕಾಳಜಿ ಕೇಂದ್ರಕ್ಕೆ ತೆರಳಲು ನಕಾರ

### ಉಪ ವಿಭಾಗಾಧಿಕಾರಿ ಸಂತೋಷ್ ಕುಮಾರ್ ಭೇಟಿ, ಮನವೊಲಿಕೆ

ಹರಿಹರ, ಆ.2 - ಮೈದುಂಬಿಕೊಂಡು ಹರಿಯುತ್ತಿರುವ ತುಂಗಭದ್ರಾ ನದಿಯ ನೀರಿನ ಪ್ರಮಾಣ ಹೆಚ್ಚಾಗಿ ನಗರದ ಗಂಗಾನಗರದ ಸುಮಾರು16 ಮನೆಗಳಿಗೆ ನೀರು ನುಗ್ಗಿದ್ದು ನಿರಾಶ್ರಿತರು ಕಾಳಜಿ ಕೇಂದ್ರಕ್ಕೆ ತೆರಳುವುದಿಲ್ಲ ಎಂದು ಪಟ್ಟು ಹಿಡಿದಿದ್ದರಿಂದ, ಸ್ಥಳಕ್ಕೆ ದಾವಣಗೆರೆ ಉಪವಿಭಾಗ ಅಧಿಕಾರಿ ಸಂತೋಷ ಕುಮಾರ್ ಭೇಟಿಕೊಟ್ಟು ನಿರಾಶ್ರಿತರಿಗೆ ಕಾಳಜಿ ಕೇಂದ್ರಗಳಿಗೆ ತೆರಳುವಂತೆ ಮನವೊಲಿಸಿದರು.

ಈ ವೇಳೆ ಎಸಿ ಸಂತೋಷ ಕುಮಾರ್ ಮಾತನಾಡಿ, ಈಗಾಗಲೇ ರಾಜ್ಯದಾದ್ಯಂತ ವಿವಿಧ ನಗರಗಳಲ್ಲಿ ಬಹಳಷ್ಟು ಮಳೆಯಿಂದಾಗಿ ಡ್ಯಾಮ್ ನಿಂದ 1 ಲಕ್ಷದ 30 ಸಾವಿರ ಕ್ಯೂಸೆಕ್ಸ್ ನೀರು ಹೊರಗಡೆ ಬಿಟ್ಟಿದ್ದು, ಅದರಿಂದಾಗಿ ಹರಿಹರದ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಇಲ್ಲಿನ ಗಂಗಾನಗರದಲ್ಲಿ 16 ಮನೆಗಳ ಜಲಾ ವೃತವಾಗಿದ್ದು ನಿರಾಶ್ರಿತ ಕುಟುಂಬಕ್ಕೆ ಪ್ರಕೃತಿ ವಿಕೋಪದ ಅಡಿಯಲ್ಲಿ ಎಪಿಎಂಸಿ ಆವರಣದಲ್ಲಿ ಕಾಳಜಿ ಕೇಂದ್ರವನ್ನು ತೆರೆಯಲಾಗಿದೆ.

ಆ ಕೊಠಡಿಯಲ್ಲಿ ನಿರಾಶ್ರಿತರ ಕುಟುಂಬದ ಸದಸ್ಯರಿಗೆ ಊಟ, ತಿಂಡಿ, ವಸತಿ, ಜೊತೆಗೆ ಆರೋಗ್ಯ ರಕ್ಷಣೆ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ನಿರಾಶ್ರಿತರು ನಮಗೆ ಪದೇ, ಪದೇ ಇದೇ ರೀತಿಯ ಸಮಸ್ಯೆ ಬರುತ್ತದೆ. ಆದ್ದರಿಂದ ನಮಗೆ ಶಾಶ್ವತ ಪರಿಹಾರವನ್ನು ನೀಡದೆ ಹೊರತು ನಾವು ಸ್ಥಳವನ್ನು ಬಿಟ್ಟು ಕದಲುವುದಿಲ್ಲ ಎಂಬ ಬಿಗು ಪಟ್ಟು ಹಿಡಿದಿಕೊಂಡಿದ್ದರು. ಅವರಿಗೆ ಸರ್ಕಾರದ ಮಾನದಂಡಗಳನ್ನು ವಿವರಿಸುವುದರ ಮೂಲಕ ಅವರನ್ನು ಮನವೊಲಿಸಲಾಗಿದ್ದು, ಅವರು ಕೂಡ ನಮ್ಮ ಮಾತಿಗೆ ಸಹಮತ ಸೂಚಿಸಿ ಸಂಜೆ ಕಾಳಜಿ ಕೇಂದ್ರಕ್ಕೆ ತೆರಳುವುದಾಗಿ ಭರವಸೆಯನ್ನು ನೀಡಿದ್ದಾರೆ ಎಂದು ಹೇಳಿದರು.

ನಿರಾಶ್ರಿತರು, ಹಾಗೂ ಜಯ ಕರ್ನಾಟಕ ಸಂಘಟನೆ ಮುಖಂಡರು, ನಗರ ಸಭೆಯ ಜಾಗದಲ್ಲಿ ನಮಗೆ ಶಾಸ್ವತ ಪರಿಹಾರವನ್ನು ಕೊಡಿಸಿ ಅಥವಾ ಜಿ. ಪ್ಲಸ್ ಮಾದರಿಯಲ್ಲಿ ಮನೆಗಳ ನಿರ್ಮಾಣ ಮಾಡಿಕೊಡುವಂತೆ ಮನವಿಯನ್ನು ಮಾಡಿಕೊಂಡಿದ್ದು. ನಮಗೆ ನಗರ ಸಭೆಯ ಜಾಗದ ಎಲ್ಲಿ ಇದಾವೆ ಮತ್ತು ಎಷ್ಟು ಎಕರೆ ಪ್ರದೇಶದಲ್ಲಿ ಇದಾವೆ ಎಂಬುದರ ಬಗ್ಗೆ, ಸಂಪೂರ್ಣ ಮಾಹಿತಿ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಮಾಹಿತಿ ಸಂಗ್ರಹಿಸಿ ಸಾರ್ವಜನಿಕರಿಗೆ ಯಾವುದೇ ರೀತಿಯ ಜೀವ ಹಾನಿಯಾಗದಂತೆ ರಕ್ಷಿಸಲು ಎಲ್ಲಾ ರೀತಿಯ ಪ್ರಯತ್ನ ಮಾಡುವುದಾಗಿ ಹೇಳಿದರು.

ಉಕ್ಕಡಗಾತ್ರಿ ಗ್ರಾಮದಲ್ಲಿ ಸಹ ಹೊಳೆ ತುಂಬಿಕೊಂಡು ಹರಿಯತ್ತಿರುವುದರಿಂದ ಎರಡು ಗ್ರಾಮದ ಮಧ್ಯೆ ಹಾದು ಹೋಗಿರುವ ರಸ್ತೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ ಎಂದು ತಿಳಿಸಿದರು.

ಜಯ ಕರ್ನಾಟಕ ಸಂಘಟನೆ ಮುಖಂಡ ಎ ಗೋವಿಂದ, ಆನಂದ್, ನಿರಾಶ್ರಿತರಾದ ರಮಿದಾ, ಯಾಸ್ಮಿನ್, ಪರ್ವಿನ್ ಬಾನು, ಅಲಿಮಾ, ಸಲ್ಮಾ ಮಾತನಾಡಿ, ಗಂಗಾನಗರದ ಸುಮಾರು 40 ಮನೆಗಳು ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ಜಲಾವೃತವಾಗುತ್ತವೆ. ಪ್ರತಿ ಸಾರಿ ಎಪಿಎಂಸಿ ಆವರಣದ ಕೊಠಡಿಯಲ್ಲಿ ಕಾಳಜಿ ಕೇಂದ್ರ ತೆರೆಯುತ್ತಾರೆ. ತದನಂತರ ನಂತರ ಇಲ್ಲಿನ ಜನರ ಕಷ್ಟ ಏನು ಎಂದು ಯಾರು ಕೇಳೋಕೆ ಬರೋಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತದ ವಿಎ ಹೇಮಂತ್ ಕುಮಾರ್, ಸಮೀರ್ ಆಹ್ಮದ್, ಅಂಜನಪ್ಪ, ನಗರಸಭೆ ಆರೋಗ್ಯ ಇಲಾಖೆಯ ಸಂತೋಷ ನಾಯ್ಕ್, ನಿರಾಶ್ರಿತರರಾದ ಅಲಿಮಾ, ತೌಸಿಯಾ, ಖಮ್ಮನಬಿ, ಮಾರುನ್ ಬಿ ಇತರರು ಹಾಜರಿದ್ದರು.

# ನಗರದಲ್ಲಿಂದು ಜನಜಾಗೃತಿ ಧರ್ಮ ಸಮಾವೇಶ



### ಶ್ರೀನಿವಾಸ್ ದಾಸಕರಿಯಪ್ಪ ಅವರಿಗೆ 'ಸಮಾಜ ಸೇವಾ ವಿಭೂಷಣ' ಬಿರುದು ಪ್ರದಾನ

ಶ್ರೀ ಅಭಿನವ ರೇಣುಕ ಮಂದಿರದಲ್ಲಿ ನಡೆಯುತ್ತಿರುವ ರಂಭಾಪುರಿ ಪೀಠದ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ 26ನೇ ವರ್ಷದ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮೋತ್ತೇಜಕ ಕಾರ್ಯಕ್ರಮದಲ್ಲಿ ಇಂದಿನ ಸಮಾರಂಭದ ವಿವರ.

ಇಂದು ಸಂಜೆ 6.30ಕ್ಕೆ ಏರ್ಪಾಡಾಗಿರುವ ಧರ್ಮೋತ್ತೇಜಕ ಸಮಾರಂಭದ ನೇತೃತ್ವವನ್ನು ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು (ಹಿರೇಮಠ, ಬಿಳಕಿ) ವಹಿಸುವರು. ಚನ್ನಗಿರಿ ಹಿರೇಮಠದ ಶ್ರೀ ಡಾ. ಕೇದಾರ ಶಿವಶಾಂತವೀರ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತ ನೀಡುವರು.

ಇದೇ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಎಸ್.ಟಿ. ಘಟಕದ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಅವರಿಗೆ 'ಸಮಾಜ ಸೇವಾ ವಿಭೂಷಣ' ಬಿರುದಿನೊಂದಿಗೆ ಗೌರವ ಶ್ರೀರಕ್ಷೆ, ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ಮಾಜಿ ಮಹಾಪೌರ ಬಿ.ಜೆ. ಅಜಯ್‌ಕುಮಾರ್, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ, ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್, ಪ್ರಸನ್ನಕುಮಾರ್, ಹರಿಹರ ಎಸ್‌ಜೆವಿಪಿ ಕಾಲೇಜಿನ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ರಂಗನ್ ವರದಿ ತಿರಸ್ಕಾರ

**(1ನೇ ಪುಟದಿಂದ)** ತಂದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಗಣಿಗಾರಿಕೆ, ಕೆಂಪು ವಲಯದ ಕೈಗಾರಿಕೆ ಹಾಗೂ ಶಾಖೋತ್ಪನ್ನ ವಿದ್ಯುತ್ ಘಟಕಗಳ ನಿರ್ಮಾಣದ ಮೇಲೆ ನಿಷೇಧ ಹೇರಲಾಗುವುದು. ಮಡಿಕೇರಿಯಲ್ಲಿ ಭೂ ಕುಸಿತವಾದ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಮಾತನಾಡಿರುವ ಸಿದ್ದರಾಮಯ್ಯ, ಕಸ್ತೂರಿ ರಂಗನ್ ವರದಿ ತಿರಸ್ಕರಿಸಲು ನಿರ್ಧರಿಸಲಾಗಿದೆ ಎಂದರು.

## ಅಪರಿಚಿತನ ಸಾವು : ಪತ್ತೆಗೆ ಮನವಿ

ದಾವಣಗೆರೆ, ಆ.2- ಸುಮಾರು 35-40 ವರ್ಷ ವಯಸ್ಸಿನ ಅಪರಿಚಿತನ ಶವ ಪತ್ತೆಯಾಗಿದೆ. ಕೋಲುಮುಖ, ಕಪ್ಪು ತಲೆಕೂದಲು, ಗಡ್ಡ ಇದ್ದು, ಬಲಗೈ ಒಳಭಾಗದಲ್ಲಿ ಓಂ ಚಿತ್ರವಿರುವ ಹಚ್ಚೆ ಗುರುತು ಇದೆ. ಬಲಗಾಲಿನ ಪಾದದ ಮೇಲೆ ಗ್ಯಾಂಗ್ರಿನ್ ರೀತಿಯ ಗಾಯದ ಗುರುತಿದ್ದು, ಮೃತನ ವಾರಸುದಾರರಿದ್ದಲ್ಲಿ ಬಡಾವಣೆ ಪೊಲೀಸ್ ಠಾಣೆ (08192-272012), ಡಿವೈಎಸ್ಪಿ ನಗರ ಕಚೇರಿ (08192-259213) ಯನ್ನು ಸಂಪರ್ಕಿಸಬಹುದು.

## ಬಿಸಿಲ ಆಘಾತದಿಂದ 374 ಸಾವು

ನವದೆಹಲಿ, ಆ. 2 - ಕಳೆದ ಮಾರ್ಚ್ 1 ರಿಂದ ಜುಲೈ 27ರ ನಡುವೆ ದೇಶದಲ್ಲಿ 374 ಜನರು ಬಿಸಿಲ ಆಘಾತಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ. ಬಿಸಿಲ ಆಘಾತದಿಂದ ಬಳಲಿದ 67,637 ಪ್ರಕರಣಗಳು ದೇಶಾದ್ಯಂತ ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವೆ ಅನುಪ್ರಿಯ ಪಟೇಲ್ ಲೋಕಸಭೆಗೆ ತಿಳಿಸಿದ್ದಾರೆ

ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚಿನ 52 ಸಾವುಗಳು ಸಂಭವಿಸಿವೆ. ಬಿಹಾರದಲ್ಲಿ 37, ಒಡಿಶಾದಲ್ಲಿ 26 ಹಾಗೂ ದೆಹಲಿಯಲ್ಲಿ 25 ಸಾವುಗಳು ಸಂಭವಿಸಿವೆ.

## ದೈಹಿಕ ಅಸಮರ್ಥತೆ ಬಗ್ಗೆ ಡಬ್ಲ್ಯೂ.ಹೆಚ್.ಒ. ವರದಿ ತಪ್ಪು

ನವದೆಹಲಿ, ಆ. 2 - ದೇಶದ ಅರ್ಧದಷ್ಟು ವಯಸ್ಕರು ದೈಹಿಕವಾಗಿ ಅಸಮರ್ಥರು ಎಂದು ವಿಶ್ವ ಆರೋಗ್ಯ ಸಂಘಟನೆ ಇತ್ತೀಚೆಗೆ ರೂಪಿಸಿರುವ ವರದಿ ತಪ್ಪು ಆಧಾರಗಳಿಂದ ಕೂಡಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಲೋಕಸಭೆಗೆ ತಿಳಿಸಿದ್ದಾರೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಅವರು ಮೂರು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದಿಂದ ಸಂಗ್ರಹಿಸಲಾದ ಮಾಹಿತಿಯನ್ನು ಆಧರಿಸಿ ವಿಶ್ವ ಆರೋಗ್ಯ ಸಂಘಟನೆ ವರದಿ ರೂಪಿಸಿದೆ. ಜನರು ಸ್ವಯಂ ನೀಡಿದ ಮಾಹಿತಿ ಆಧರಿಸಿ ಈ ವರದಿ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

## 50 ಸಾವಿರ ಕೋಟಿ ರೂ.ಗಳ 8 ಕಾರಿಡಾರ್ ಯೋಜನೆಗಳಿಗೆ ಒಪ್ಪಿಗೆ

ನವದೆಹಲಿ, ಆ. 2 - 936 ಕಿಲೋಮೀಟರ್ ಉದ್ದದ ಉನ್ನತ ವೇಗದ ಎಂಟು ರಾಷ್ಟ್ರೀಯ ರಸ್ತೆ ಕಾರಿಡಾರ್‌ಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಯೋಜನೆಗೆ ಒಟ್ಟು 50,655 ಕೋಟಿ ರೂ.ಗಳ ಹೂಡಿಕೆಯಾಗಲಿದೆ. ಈ ಯೋಜನೆಯಿಂದ ದೇಶಾದ್ಯಂತ ಸರಕು ಸಾಗಣೆ ಸಂಪರ್ಕ ಸುಧಾರಣೆಯಾಗಲಿದೆ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಎಂಟು ಯೋಜನೆಗಳಿಂದ ನೇರವಾಗಿ ಮತ್ತು ಪರೋಕ್ಷವಾಗಿ 4.42 ಕೋಟಿ ಮಾನವ ದಿನಗಳ ಉದ್ಯೋಗ ದೊರೆಯಲಿದೆ ಎಂದು ತಿಳಿಸಲಾಗಿದೆ.

ಆಗ್ರಾ - ಗ್ವಾಲಿಯರ್, ಖರಗ್‌ಪುರ - ಮೊರೆಗ್ರಾಂ, ತರದ್ - ದೀಸಾ - ಮೆಹಸಾನಾ - ಅಹಮದಾಬಾದ್, ಅಯೋಧ್ಯೆ ರಿಂಗ್ ರಸ್ತೆ, ಪಥಲ್ಗಾಂವ್ - ಗುಮ್ಲ ಹಾಗೂ ಕಾನ್ಪುರ ರಿಂಗ್ ರಸ್ತೆ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ.

## ಕೊರೊನಾ ಲಸಿಕೆಗಾಗಿ 36,397 ಕೋಟಿ ರೂ. ವೆಚ್ಚ

ನವದೆಹಲಿ, ಆ. 2 - ಕೊರೋನಾ ಲಸಿಕೆಗಳನ್ನು ಉಚಿತವಾಗಿ ಪೂರೈಸಲು ಕೇಂದ್ರ ಸರ್ಕಾರ ಇದುವರೆಗೂ 36,397.65 ಕೋಟಿ ರೂ.ಗಳ ವೆಚ್ಚ ಮಾಡಿದೆ ಎಂದು ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್ ಲೋಕಸಭೆಗೆ ತಿಳಿಸಿದ್ದಾರೆ.

ಜುಲೈ 29, 2024 ರವರೆಗೆ 220.68 ಕೋಟಿ ಡೋಸ್ ಲಸಿಕೆಗಳನ್ನು ದೇಶಾದ್ಯಂತ ನೀಡಲಾಗಿದೆ ಎಂದು ಹೇಳಿದ್ದಾರೆ.

# ಅನುದಾನ ಕಡಿಮೆ, ಆರೋಗ್ಯ ಕಡೆಗಣನೆ

**(1ನೇ ಪುಟದಿಂದ)** ಒದಗಿಸುತ್ತಿಲ್ಲ. ಜನರು ಆರೋಗ್ಯಕ್ಕಾಗಿ ಕೈಯಿಂದ ಹಣ ಖರ್ಚು ಮಾಡಿಕೊಂಡು ಬಡತನಕ್ಕೆ ಸಿಲುಕುತ್ತಿದ್ದಾರೆ. ಶೇ.63ರಷ್ಟು ಭಾರತೀಯರು ಈಗಲೂ ಆರೋಗ್ಯ ಸೇವೆಯ ವೆಚ್ಚವನ್ನು ತಾವೇ ಭರಿಸುವ ಪರಿಸ್ಥಿತಿ ಇದೆ ಎಂದವರು ಹೇಳಿದರು.

ಕೊರೊನಾ ಸಮಯದಲ್ಲಿ ಆದ ಅನಾಹುತಗಳಿಂದ ಸರ್ಕಾರ ಯಾವುದೇ ಪಾಠ ಕಲಿತಿಲ್ಲ. ಈಗಲೂ ನಮ್ಮ ಆರೋಗ್ಯ ಮೂಲಭೂತ ವ್ಯವಸ್ಥೆ ಕೊರೊನಾದಂತಹ ಪರಿಸ್ಥಿತಿ ಎದುರಿಸಲು ಸಾಧ್ಯವಾಗದ ರೀತಿಯಲ್ಲಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಜನಸಮೂಹ ಆರೋಗ್ಯವಂತವಾಗಿದ್ದಾಗ ಹಾಗೂ ಆರೋಗ್ಯದ ಸಂಶೋಧನೆ ಮತ್ತು ಮೂಲಭೂತ ಸೌಲಭ್ಯದಲ್ಲಿ ಹೆಚ್ಚಿನ ಹೂಡಿಕೆ ಆದಾಗ ಮಾತ್ರ ಕೊರೊನಾದಂತಹ ಪರಿಸ್ಥಿತಿ ಎದುರಿಸಲು ಸಾಧ್ಯ. ಆದರೆ, ಈಗ ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಅದು ಸಾಧ್ಯವಾಗದು ಎಂದರು.

ಬಜೆಟ್‌ನಲ್ಲಿ ಆರೋಗ್ಯ ವಲಯಕ್ಕೆ ತೆಗೆದುಕೊಂಡಿರುವ ಕ್ರಮಗಳು ಕೇವಲ ಅಲಂಕಾರಿಕವಾಗಿವೆ. ಇದರಿಂದ ಆರೋಗ್ಯ ವಲಯದ ರೂಪಾಂತರಣವಾಗುವುದಿಲ್ಲ. ಕೇವಲ ವಿಶ್ವಗುರು ಎಂದು ಹೇಳುವುದರಿಂದ ವಿಶ್ವ ಗುರು ಆಗುವುದಿಲ್ಲ. ವಿಶ್ವಗುರು ಆಗಲು ಮನಸ್ಸು, ಬುದ್ಧಿ ಹಾಗೂ ಬಜೆಟ್ ಅನುದಾನ ಬೇಕಿದೆ. ಆರೋಗ್ಯ ವಲಯದ ಬಗ್ಗೆ ಸಮಗ್ರ ಮರು ಆಲೋಚನೆಯ ಅಗತ್ಯವಿದೆ. ಕೇಂದ್ರ ಸರ್ಕಾರ ದೂರ ದೃಷ್ಟಿಯ ಸುಧಾರಣೆಗಳಿಗೆ ಮುಂದಾಗಬೇಕಿದೆ ಎಂದವರು ಒತ್ತಾಯಿಸಿದರು.

### ಕನ್ನಡದಲ್ಲಿ ಮಾತು ಆರಂಭ, ದಾವಣಗೆರೆ ಜನತೆಗೆ ಕೃತಜ್ಞತೆ

**(1ನೇ ಪುಟದಿಂದ) ಸಿಹಿ ತಿನಿಸಾದ ಮೈಸೂರು ಪಾಕ್ ಅನ್ನು ನನ್ನ ಕಡೆಯಿಂದ ಎಲ್ಲ ಸಭೆಗಳಲ್ಲಿ ಒದಗಿಸುತ್ತೇನೆ ಎಂದು ಹೇಳಿದರು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 'ಬಜೆಟ್ ಹಲ್ವಾ' ಅನ್ನು ಕೆಲವೇ ವರ್ಗದವರಿಗೆ ಸೀಮಿತಗೊಳಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದನ್ನು ಪ್ರಭಾ ಪರೋಕ್ಷವಾಗಿ ಪ್ರಸ್ತಾಪಿಸಿದಂತಿತ್ತು.**

### ಉದ್ಯಮಿಗಳು ಆರೋಗ್ಯಕ್ಕೆ ನೆರವಾಗಲಿ

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಕರ್ನಾಟಕದಲ್ಲಿ ಮೂರು ವರ್ಷಗಳ ಕಾಲ ಶಾಲೆಗಳಿಗೆ ಮೊಟ್ಟೆ ಒದಗಿಸಲು 1,500 ಕೋಟಿ ರೂ.ಗಳನ್ನು ನೀಡಿದೆ. ಇದೇ ರೀತಿ ಇತರೆ ಉದ್ಯಮಿಗಳೂ ಸಹ ನೆರವು ನೀಡುವಂತೆ ಕೇಂದ್ರ ಸರ್ಕಾರ ಪ್ರಯತ್ನ ನಡೆಸಬೇಕು. 'ಎ' ಇಂದ ಹೆಸರು ಆರಂಭವಾಗುವ ಉದ್ಯಮಿಗಳನ್ನು ಸಂಪರ್ಕಿಸಿದರೆ ಯಾರಾದರೂ ಸಿಗಬಹುದು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

### ರಾಯಚೂರಿಗೆ ಎಐಐಎಂಎಸ್ ನೀಡಲು ಆಗ್ರಹ

ಕರ್ನಾಟಕದ ರಾಯಚೂರು ಆಕಾಂಕ್ಷಿ ಜಿಲ್ಲೆಯಾಗಿದೆ. ಇತರೆ ವಲಯಗಳಿಗೆ ಹೋಲಿಸಿದರೆ ಇಲ್ಲಿ ತಲಾ ವರಮಾನ ಕಡಿಮೆ. ಇಲ್ಲಿ ಎಐಐಎಂಎಸ್ ಸ್ಥಾಪಿಸುವಂತೆ ಕರ್ನಾಟಕ ಸರ್ಕಾರ ಮನವಿ ಸಲ್ಲಿಸಿದೆ. ಇದಕ್ಕೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಒತ್ತಾಯಿಸಿದರು.

ದೇಶಕ್ಕೆ ಉನ್ನತ ಗುಣಮಟ್ಟದ ವೈದ್ಯಕೀಯ ಕೇಂದ್ರಗಳ ತುರ್ತು ಅಗತ್ಯವಿದೆ. ನಾವು 20 ಸಾವಿರ ಕೋಟಿ ರೂ. ವೆಚ್ಚದಲ್ಲಿ ಸೇತುವೆಗಳನ್ನು ನಿರ್ಮಿಸಬಹುದಾದರೆ, ವಿಶ್ವ ದರ್ಜೆಯ ಆಸ್ಪತ್ರೆಗಳನ್ನು ನಿರ್ಮಿಸಲು ಏಕೆ ಸಾಧ್ಯವಾಗುತ್ತಿಲ್ಲ? ಎಂಬ ಬಗ್ಗೆ ಯೋಚಿಸಬೇಕಿದೆ ಎಂದು ಹೇಳಿದರು.


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 2-8-2024ರಂದು ದೈವಾಧೀನರಾದ ನಮ್ಮ ವಿದ್ಯಾಸಂಸ್ಥೆಯ ನಿವೃತ್ತ ಪ್ರಾಂಶುಪಾಲರಾದ

## ಶ್ರೀ ಹೆಚ್. ದುರುಗಪ್ಪ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಶ್ರೀಯುತರ ಪಾರ್ಥಿವ ಶರೀರವನ್ನು ದಾವಣಗೆರೆ ನಿಟುವಳ್ಳಿ ಮೌನೇಶ್ವರ ಬಡಾವಣೆಯ A-1 ಕ್ರಾಸ್‌ನಲ್ಲಿರುವ ಅವರ ನಿವಾಸದಲ್ಲಿ ಬೆಳಿಗ್ಗೆ 10 ಗಂಟೆಯವರೆಗೂ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ಮೃತರ ಅಂತ್ಯಸಂಸ್ಕಾರವನ್ನು ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ದಾಸನಮಳಿಗೆ ಗ್ರಾಮದಲ್ಲಿ ನೆರವೇರಿಸಲಾಗುವುದು.

**ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ**
**ಸಂಜೀವಿನಿ ಸ್ಕೂಲ್ ಆಫ್ ನರ್ಸಿಂಗ್**


## ನಾಳೆ ಅಭಿನಂದನಾ ಸಮಾರಂಭ





ದಾವಣಗೆರೆಮ ಆ. 2 - ಬೆಂಗಳೂರು ಪ್ರಾಥಮಿಕ ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕ ಎಂ.ಎಸ್. ಪ್ರಸನ್ನ ಕುಮಾರ್ ಹಾಗೂ ಜಮಖಂಡಿ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಸಹ ನಿರ್ದೇಶಕ ಜಿ. ಆರ್. ತಿಪ್ಪೇಶಪ್ಪ ಅವರುಗಳಿಗೆ ನಾಡಿದ್ದು ದಿನಾಂಕ 4ರ ಭಾನುವಾರ ಬೆಳಗ್ಗೆ 10 ಗಂಟೆಗೆ ನಗರದ ಅಥಣಿ ಎಸ್. ಬಿ. ಸಿ. ಕಾಲೇಜಿನಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ. ಸನ್ಮಾನಿತರು ದಾವಣಗೆರೆ ಜಿಲ್ಲೆಯವರಾಗಿದ್ದು, ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ಪರ ಕೆಲಸಗಳನ್ನು ನಿರ್ವಹಿಸಿ, ಶಿಕ್ಷಕರ ಅಭಿಮಾನಕ್ಕೆ ಪಾತ್ರರಾದ ಅವರನ್ನು ಅಭಿನಂದಿಸಲಾಗುವುದು, ಅಭಿಮಾನಿಗಳು ಭಾಗವಹಿಸಬೇಕೆಂದು ಅಭಿಮಾನಿ ಬಳಗದ ಕೆ.ಜಿ. ಶಿವಶಂಕರ್ ಮನವಿ ಮಾಡಿದ್ದಾರೆ.



### ಭಾನುವಳ್ಳಿಯಲ್ಲಿ ವಿದ್ಯುತ್ ತಗುಲಿ ಯುವಕನ ಸಾವು


ಮಲೇಬೆನ್ನೂರು, ಆ.2- ಹೊಲದಲ್ಲಿ ಪಂಪ್‌ಸೆಟ್ ಸ್ಟಾರ್ಟ್ ಮಾಡುವಾಗ ವಿದ್ಯುತ್ ಸ್ಪರ್ಶವಾಗಿ ರೈತನೋರ್ವ ಸ್ಥಳದಲ್ಲಿಯೇ ಸಾವಿಗೀಡಾಗಿರುವ ಘಟನೆ ಶುಕ್ರವಾರ ಭಾನುವಳ್ಳಿಯಲ್ಲಿ ನಡೆದಿದೆ. ಗ್ರಾಮದ ದೊಡ್ಡಮನಿ ಸಿದ್ದಪ್ಪರ ಮಗ ಡಿ.ಎಸ್.ಸುರೇಶ್ (40) ಮೃತ ದುರ್ದೈವಿ. ಸುರೇಶ್ ಅಂತ್ಯಕ್ರಿಯೆಯು ಇಂದು ಸಂಜೆ ನೆರವೇರಿತು.

### ಹರಿಹರದ ಹೆಚ್.ಬಿ. ಹೇಮಪ್ಪ ನಿಧನ



ದಾವಣಗೆರೆ ಬುದ್ಧ ಬಸವ ನಗರ (ಗಾಂಧಿನಗರ) ಮೈಲಮ್ಮ ದೇವಸ್ಥಾನದ ಪಕ್ಕದ ವಾಸಿ, ಅಕ್ಕಿ ವ್ಯಾಪಾರಿ, ಹೆಚ್.ಬಿ. ಹೇಮಪ್ಪ (73) ರವರು ದಿನಾಂಕ 02.8.2024ರ ಶುಕ್ರವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.8.2024ರ ಶನಿವಾರ ಗಾಂಧಿನಗರದ ಹಿಂದೂ ರುದ್ರ ಭೂಮಿಯಲ್ಲಿ ನೇರವೇರಲಿದೆ.

### ಶಾಮನೂರು ಹೆಚ್.ಆರ್. ಚಂದ್ರಶೇಖರ್ ನಿಧನ




ದಾವಣಗೆರೆ ಸಿಟಿ ಶಾಮನೂರು ಗ್ರಾಮದ ವಾಸಿ ಶ್ರೀಮತಿ ಸುಶೀಲಮ್ಮ ಮತ್ತು ಹೊನ್ನೂರರ (ಬಸದರ) ಹೆಚ್. ರೇವಣಸಿದ್ದಪ್ಪ ಇವರ ಪುತ್ರ ಹೆಚ್.ಆರ್. ಚಂದ್ರಶೇಖರ್ (49) ಇವರು ದಿನಾಂಕ 2.8.2024ರ ಶುಕ್ರವಾರ ಸಂಜೆ 3.35ಕ್ಕೆ ನಿಧನರಾದರು. ತಂದೆ, ತಾಯಿ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.8.2024ರ ಶನಿವಾರ ಮಧ್ಯಾಹ್ನ 12ಕ್ಕೆ ಗ್ಲಾಸ್‌ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಹೊಸದುರ್ಗ ರೈಲ್ವೆ ನಿಲ್ದಾಣದಲ್ಲಿ ಅಪರಿಚಿತನ ಸಾವು

ದಾವಣಗೆರೆ, ಆ. 2- ರಾಮಗಿರಿ-ಹೊಸದುರ್ಗ ರೈಲ್ವೆ ನಿಲ್ದಾಣಗಳ ಮಧ್ಯೆ ರೈಲ್ವೆ ಟ್ರ್ಯಾಕ್ ಪಕ್ಕದಲ್ಲಿ ಸುಮಾರು 55-60 ವಯಸ್ಸಿನ, ಸಾಧಾರಣ ಮೈಕಟ್ಟು, ದುಂಡು ಮುಖ, ತಲೆಯಲ್ಲಿ ಉದ್ದನೆಯ ಕಪ್ಪು -ಬಿಳಿ ಮಿಶ್ರಿತ ಕೂದಲು, ಬಿಳಿ ಬಣ್ಣದ ಕುರುಚಲು ಗಡ್ಡದ ವ್ಯಕ್ತಿ ಮೃತಪಟ್ಟಿದ್ದಾನೆ.

ಈತನ ವಾರಸುದಾರರಿದ್ದಲ್ಲಿ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (08192-259643) ಅಥವಾ (9480802123) ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ (080-22871291) ಗೆ ಸಂಪರ್ಕಿಸಬಹುದು.

### ಹೊನ್ನಾಳಿ : ನದಿಯಲ್ಲಿ ತೇಲಿ ಹೋದ ವ್ಯಕ್ತಿ ಶವವಾಗಿ ಪತ್ತೆ



ಹೊನ್ನಾಳಿ, ಆ.2- ಪಟ್ಟಣದ ಬಾಲ್ರಾಜ್ ಘಾಟ್ ಹತ್ತಿರದ ತುಂಗಭದ್ರಾ ನದಿಯಲ್ಲಿ ಮಂಗಳವಾರ ಮಧ್ಯಾಹ್ನ ನೀರಿನಲ್ಲಿ ತೇಲಿ ಹೋದ ವ್ಯಕ್ತಿ ಬಲ್ಲೇಶ್ವರ ಅವರು, ಗ್ರಾಮದ ನದಿ ದಡದಲ್ಲಿ ಇಂದು ಬೆಳಿಗ್ಗೆ 6 ಗಂಟೆಗೆ ಶವವಾಗಿ ಪತ್ತೆಯಾದ ಘಟನೆ ನಡೆದಿದೆ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ತಿಳಿಸಿದ್ದಾರೆ. ಮೃತ ವ್ಯಕ್ತಿಯು ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕು ನಾಗಮಂಡ ಗ್ರಾಮದ ಶಿವಪ್ಪ ಗೊರಪ್ಪ ಎಂದು ಕುಟುಂಬದ ಮೂಲಗಳು ಸ್ಪಷ್ಟಪಡಿಸಿದ್ದಾರೆ.

ಹೊನ್ನಾಳಿ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವವನ್ನು ನೀಡಿದ್ದು, ಇಂದು ಸಂಜೆ 4 ಗಂಟೆಗೆ ನಾಗವಂದದಲ್ಲಿ ಶವ ಸಂಸ್ಕಾರವನ್ನು ನಡೆಸಲಾಗಿದೆ.

ಜುಲೈ 31 ರಂದು ನದಿಯಲ್ಲಿ ತೇಲಿ ಹೋದ ವ್ಯಕ್ತಿ ನಾಪತ್ತೆ ಎಂಬುದಾಗಿ ವರದಿ ಮಾಡಲಾಗಿತ್ತು.

# ರುದ್ರಭೂಮಿ ಮಂಜೂರಾತಿಗೆ ದಲಿತ ಸಮುದಾಯ ಆಗ್ರಹ



ಹರಿಹರ

ಹರಿಹರ, ಆ. 2 - ನಗರದ ಹೊರವಲಯದ ಗುತ್ತೂರು ಗ್ರಾಮದ ದಲಿತ ಸಮುದಾಯಕ್ಕೆ ರುದ್ರಭೂಮಿ ಮಂಜೂರು ಮಾಡುವಂತೆ ಆಗ್ರಹಿಸಿ ಗುತ್ತೂರು ಗ್ರಾಮ ಮತ್ತು ನಗರದ ದಲಿತ ಸಮುದಾಯದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಗುರುಬಸವರಾಜ್ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ದಲಿತ ಸಮುದಾಯ ಮುಖಂಡರು ಮಾತನಾಡಿ, ತಾಲ್ಲೂಕಿನ ಗುತ್ತೂರು ಗ್ರಾಮದಲ್ಲಿ ದಲಿತ ಸಮುದಾಯದವರಿಗೆ ಸ್ಮಶಾನ ವ್ಯವಸ್ಥೆ ಇಲ್ಲದಿರುವುದರಿಂದ, ಸುಮಾರು 70 ವರ್ಷಗಳಿಂದ ತುಂಗಭದ್ರಾ ನದಿ ದಡದಲ್ಲಿ ಶವ ಸಂಸ್ಕಾರ ಮಾಡುತ್ತಾ ಬಂದಿದ್ದೇವೆ ಎಂದು ತಿಳಿಸಿದರು.

ಮಳೆಗಾಲ ಮತ್ತು ಹೊಳೆ ತುಂಬಿದಾಗ ಶವ ಸಂಸ್ಕಾರ ಮಾಡಲು ತೀವ್ರ ತೊಂದರೆ ಆಗುತ್ತಿದ್ದು, ಶವ ಹೊತ್ತು ನೀರಿನಲ್ಲಿ ಸಾಗುವಾಗ ಕಾಲು ಜಾರಿದು ಕೈ-ಕಾಲು ಮುರಿದುಕೊಂಡ ಘಟನೆಗಳೂ ನಡೆದಿವೆ ಎಂದು ಅಳಲು ತೋಡಿದರು.

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ಅಂತ್ಯಸಂಸ್ಕಾರ ಮಾಡಲು ಭಯ ಹಾಗೂ ಆತಂಕ ಪಡುವಂತಾಗಿದೆ. ಆದ್ದರಿಂದ ಗುತ್ತೂರು ಕೆಇಬಿ ಬಳಿಯ ಸರ್ವೇ ನಂ: 89/1, 77/1 ಮತ್ತು 78ರಲ್ಲಿ ಸರ್ಕಾರದ ಜಾಗವಿದ್ದು, ಇವುಗಳಲ್ಲಿ ಯಾವುದಾದರೊಂದನ್ನು ರುದ್ರಭೂಮಿ ಮಾಡಲು ಸ್ಥಳ ಕಲ್ಪಿಸಬೇಕೆಂದು ಆಗ್ರಹಿಸಿದರು.

ಮಾದಿಗ ಸಮಾಜದ ಅಧ್ಯಕ್ಷ ರಜನಿಕಾಂತ್, ಮಾಜಿ ದೂಡಾ ಸದಸ್ಯರಾದ ಎಚ್. ನಿಜಗುಣ, ಎ.ಕೆ. ಕೊಟ್ರಪ್ಪ, ನಗರಸಭೆ ಸದಸ್ಯ ಪಿ.ಎನ್. ವಿರೂಪಾಕ್ಷಪ್ಪ, ಹನುಮಂತಪ್ಪ, ಜಿ.ವಿ. ವೀರೇಶ್, ಎಂ.ಬಿ. ಅಣ್ಣಪ್ಪ, ನಾಗಭೂಷಣ, ನಾಮನಿರ್ದೇಶನ ಸದಸ್ಯ ಸಂತೋಷ ದೊಡ್ಡಮನಿ, ಭಾನುವಳ್ಳಿ ಮಂಜಪ್ಪ, ಗುತ್ತೂರು ನಿಂಗರಾಜ್, ಪ್ರತಾಪ್, ರವಿಕುಮಾರ್, ಎಚ್. ಸುಧಾಕರ್, ಕೊಟ್ರೇಶ್, ಬೇವಿನಹಳ್ಳಿ ಎ.ಕೆ. ಶಿವರಾಮು, ರಾಜಶೇಖರ, ಜಗದೀಶ್, ಮಂಜುನಾಥ್, ವಿಕ್ರಮ್, ನಿಂಗಪ್ಪ, ದೊರೆ, ಅಣ್ಣಪ್ಪ, ಸುರೇಶ್, ಹರೀಶ್, ಅಪ್ಪು, ನಾಗರಾಜ್, ಚೌಡಪ್ಪ, ರಾಜು, ಹನುಮಂತ, ಲೋಹಿತ್, ಮಲ್ಲೇಶ್, ಅಜಯ್, ಗುಂಡಿ ಬಸಪ್ಪ, ಹೊನ್ನಪ್ಪ, ಪರುಶುರಾಮ್ ಇತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೆ.ಟಿ.ಜೆ ನಗರ 1 ರಿಂದ 18ನೇ ಕ್ರಾಸ್, ಶಿವಪ್ಪ ಸರ್ಕಲ್, ಸಿದ್ದಮ್ಮ ಪಾರ್ಕ್ ಸುತ್ತಮುತ್ತಲಿನ ಪ್ರದೇಶ. ವಿದ್ಯಾರ್ಥಿ ಭವನ ವೃತ, ಡಾಂಗೇ ಪಾರ್ಕ್, ಭಗತ್ ಸಿಂಗ್ ನಗರ, ಲೇಬರ್ ಕಾಲೋನಿ, ಹದಡಿ ರೋಡ್, ಮುರುಘಾ ಮಠ, ಕೆ.ಬಿ ಬಡಾವಣೆ, ತ್ರಿಶೂಲ್ ಕಲಾಭವನ, ತ್ರಿಶೂಲ್ ರಸ್ತೆ, ಆರೈಕೆ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಕೆ.ಬಿ. ಬಡಾವಣೆ, ಲಾಯರ್ ರಸ್ತೆ, ದೀಕ್ಷಿತ್ ರಸ್ತೆ, ಬಿಲಾಲ್ ಕಾಂಪೌಂಡ್, ಪಿ.ಬಿ. ರಸ್ತೆಯ (ಗಾಂಧಿ ಸರ್ಕಲ್‌ನಿಂದ ಈರುಳ್ಳಿ ಮಾರ್ಕೆಟ್‌ವರೆಗೆ) ಇಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಎಲ್ಲೆಡೆ ಕೆರೆ-ಕೊಳ್ಳ ತುಂಬಿ ಹರಿದರೂ.. ರಾಣೇಬೆನ್ನೂರು ದೊಡ್ಡಕೆರೆಗಿಲ್ಲದ ಭಾಗ್ಯ..!





ರಾಣೇಬೆನ್ನೂರು

ರಾಣೇಬೆನ್ನೂರು,ಆ.2- ನಾಡಿನಾದ್ಯಂತ ಬೀಳುತ್ತಿರುವ ಮಳೆಯಿಂದ ಹೊಳೆ-ಹಳ್ಳಗಳು ಬೋರ್ಗರೆಯುತ್ತ ಹರಿದವು, ಕೆರೆ-ಕೊಳ್ಳ ತುಂಬಿ ತುಳುಕಾಡಿದವಾದರೂ ರಾಣೇಬೆನ್ನೂರು ದೊಡ್ಡಕೆರೆಗೆ ಆ ಭಾಗ್ಯವಿಲ್ಲ. ಅಲ್ಲಲ್ಲಿ ಬಂದ ಮಳೆಯ ನೀರಿನಿಂದ ತಗ್ಗು ಪ್ರದೇಶದಲ್ಲಿ ಸಂಗ್ರಹವಾಗಿದ್ದು, ಕೆರೆ ತುಂಬಾ ಬೆಳೆದಿರುವ ಗಿಡಗಂಟೆಗಳಿಂದ ಇರುವ ನೀರು ಒಂದೆರಡು ತಿಂಗಳಲ್ಲಿ ಇಂಗಿ ಕೆರೆ ಖಾಲಿ ಆಗಬಹುದು ಎನ್ನುವ ಆತಂಕ ಜನರಲ್ಲುಂಟಾಗಿದೆ.

ಸುಮಾರು 250ಕ್ಕೂ ಅಧಿಕ ಎಕರೆಯಷ್ಟು ವಿಸ್ತೀರ್ಣದಲ್ಲಿರುವ ಈ ಕೆರೆ ತುಂಬಿದರೆ ಅಂತರ್ಜಲ ವೃದ್ದಿಸಿ, ಸುತ್ತಲಿನ 400 ಎಕರೆಯಷ್ಟು ನೀರಾವರಿ, ಅಡವಿ ಆಂಜನೇಯ ಬಡಾವಣೆ, ಗಂಗಾಜಲ ತಾಂಡಾ ಜೊತೆಗೆ ಕೊಟ್ಟೂರೇಶ್ವರ ನಗರ, ಚೌಡೇಶ್ವರಿ ಬಡಾವಣೆ ಸೇರಿದಂತೆ ಭಾಗಶಃ ರಾಣೇಬೆನ್ನೂರು ನಗರದ ಕೊಳವೆಬಾವಿಗಳಲ್ಲಿ ನೀರೊದಗಲಿದೆ.

ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಅವರು ಈ ಕೆರೆಯನ್ನ ನೂರಾರು ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿ ನಗರ ವಾಸಿಗಳಿಗೆ ಮನರಂಜನಾ ತಾಣ ಮಾಡಲು ಕೈಗೊಳ್ಳಲಾದ ಯೋಜನೆ ಅಪೂರ್ಣಗೊಂಡಿದೆ. ಅಡವಿ ಆಂಜನೇಯ ಬಡಾವಣೆ ಸಮೀಪ ಕೆರೆ ಕೋಡಿ ಬೀಳುವಲ್ಲಿ ಇಪ್ಪತ್ತು ಎಕರೆಯಷ್ಟು ಕೆರೆಯಂಗಳದ ಬಯಲನ್ನು ದನಕರುಗಳಿಗೆ ಕುಡಿಯುವ ನೀರು ಸಂಗ್ರಹಿಸಲು ಗುಂಡಿ ಮಾಡಲಾಗಿದ್ದರೂ ಒಂದು ಹನಿ ನೀರು ಸಂಗ್ರಹವಾಗಲ್ಲದಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ತುಂಗಭದ್ರಾ ನದಿ ನೀರು ತಂದು ಕೆರೆ ತುಂಬಿಸಲು ಶಾಸಕ ಪ್ರಕಾಶ ಕೋಳಿವಾಡ ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬುದು ಜನರ ಒತ್ತಾಯವಾಗಿದೆ.

# ಇಂದಿನಿಂದ 'ಮೈಸೂರು ಚಲೋ' ಪಾದಯಾತ್ರೆ

**(1ನೇ ಪುಟದಿಂದ)** ಬಿ.ಎಸ್.ಯಡಿಯೂರಪ್ಪ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪಾದಯಾತ್ರೆಗೆ ಚಾಲನೆ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಬಿಜೆಪಿ ಮತ್ತು ಎನ್‌ಡಿಎ ಮಿತ್ರ ಪಕ್ಷ ಜೆಡಿಎಸ್ ಜಂಟಿಯಾಗಿ ಪಾದಯಾತ್ರೆ ಹಮ್ಮಿಕೊಂಡಿವೆ ಎಂದರು.

ಪಾದಯಾತ್ರೆಯ ರೂಟ್ ಮ್ಯಾಪ್ ಸಿದ್ಧಗೊಂಡಿದ್ದು, ನಾಳೆ ಬೆಳಗ್ಗೆ 8.30ಕ್ಕೆ ಕೆಂಗೇರಿ ಕೆಂಪಮ್ಮ ದೇವಸ್ಥಾನದ ಬಳಿಯ ಮಂಜುನಾಥ ಕನ್ವೆನ್ಷನ್ ಹಾಲ್ ಬಳಿಯಿಂದ ಆರಂಭವಾಗಲಿರುವ ಪಾದಯಾತ್ರೆ, ಮೈಸೂರಿಗೆ 8 ದಿನಗಳಲ್ಲಿ ಕ್ರಮಿಸಲಿದೆ ಎಂದು ಹೇಳಿದರು.

ಮೊದಲ ದಿನ 16 ಕಿಲೋ ಮೀಟರ್ ಪಾದಯಾತ್ರೆ ನಡೆಯಲಿದ್ದು, ಎರಡನೇ ದಿನ 22 ಕಿಲೋ ಮೀಟರ್, ಮೂರನೇ ದಿನ ಸುಮಾರು 20 ಕಿಲೋ ಮೀಟರ್ ಕ್ರಮಿಸಲಿದೆ. ಆಗಸ್ಟ್ 6ರಂದು ನಿಡಘಟ್ಟ ಸುಮಿತ್ರಾದೇವಿ ಕನ್ವೆನ್ಷನ್ ಹಾಲ್‌ನಿಂದ ಸುಮಾರು 20 ಕಿಲೋ ಮೀಟರ್ ಕ್ರಮಿಸಲಿದೆ, ಮರುದಿನ ಮಂಡ್ಯದ ಶಶಿಕಿರಣ್ ಕನ್ವೆನ್ಷನ್ ಹಾಲ್‌ನಿಂದ ಆರಂಭವಾಗಿ 16 ಕಿಲೋ ಮೀಟರ್ ಕ್ರಮಿಸಿ, ಆಗಸ್ಟ್ 8ರಂದು ತೂಬಿನಕೆರೆ ಕೈಗಾರಿಕಾ ಪ್ರದೇಶದ ಬಳಿಯಿಂದ, 9ರಂದು ಶ್ರೀರಂಗಪಟ್ಟಣ ಮಂಜುನಾಥ ಕಲ್ಯಾಣ ಮಂಟಪದಿಂದ, ಆಗಸ್ಟ್ 10ರಂದು ಮೈಸೂರಿನಲ್ಲಿ ಪಾದಯಾತ್ರೆ ಸಮಾರೋಪಗೊಳ್ಳಲಿದೆ.

ಪಾದಯಾತ್ರೆಯಲ್ಲಿ ಪ್ರತಿದಿನ ಕನಿಷ್ಠ 8ರಿಂದ 10 ಸಾವಿರ ಜನರು ಪಾಲ್ಗೊಳ್ಳಲಿದ್ದು, ರಾಜ್ಯದ ಮೂಲೆ ಮೂಲೆಯಿಂದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪಾದಯಾತ್ರೆಗೆ ಆಗಮಿಸಲಿದ್ದಾರೆ ಎಂದರು.

ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟ, ಬಡವರ, ಪರಿಶಿಷ್ಟ ಸಮುದಾಯಗಳ ವಿರೋಧಿಯಾಗಿದೆ, ಅಭಿವೃದ್ಧಿ ಶೂನ್ಯ ಕೊಡುಗೆ ನೀಡಿದ್ದು, ಅಸಮರ್ಥ ಸರ್ಕಾರ ಎಂದು ಟೀಕಿಸಿದರು.

ಅಹಿಂದ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲ ಸಮುದಾಯ ಗಳಿಗೆ ಮೋಸ ಮಾಡಿದ್ದಾರೆ, ಪರಿಶಿಷ್ಟರಿಗೆ ಮೀಸಲಿಟ್ಟ ಹಣ ಲೂಟಿ ಮಾಡಿದ್ದಾರೆ.

ಮುಡಾದಲ್ಲಿ ಅಕ್ರಮ ನಿವೇಶನ ಹಂಚಿಕೆ ಮೂಲಕ ಅಪಾರ ಹಣ ಲೂಟಿ ಮಾಡಲಾಗಿದೆ, ನಮ್ಮ ಹೋರಾಟ ವ್ಯಕ್ತಿ ವಿರುದ್ಧ ಅಲ್ಲ, ಕೆಟ್ಟ ವ್ಯವಸ್ಥೆಯ ವಿರುದ್ಧ ಎಂದವರು ಹೇಳಿದರು.

ಸದನದ ಒಳಗೆ ಮತ್ತು ಹೊರಗೆ ಬಿಜೆಪಿ-ಜೆಡಿಎಸ್ ಜೊತೆಗೂಡಿ ಹೋರಾಟ ಮಾಡಿದ್ದು, ಹಗರಣಗಳು ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ನಮ್ಮ ಪ್ರಶ್ನೆಗಳಿಗೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಮೊದಲು ಉತ್ತರಿಸಲಿ ಎಂದರು.

ನಿನ್ನೆ ಮುಖ್ಯಮಂತ್ರಿಗಳಿಲ್ಲದೇ ಸಚಿವ ಸಂಪುಟ ಸಭೆ ನಡೆಸುವ ಮೂಲಕ ಕಾಂಗ್ರೆಸ್ ಸರ್ಕಾರ ಹೊಸ ಇತಿಹಾಸ ಸೃಷ್ಟಿಸಿದೆ, ಸಭೆ ರಾಜ್ಯಪಾಲರ ನೋಟಿಸ್ ಪ್ರಶ್ನಿಸುವ ಕೆಲಸ ಮಾಡಿದೆ ಎಂದವರು ಟೀಕಿಸಿದರು.

ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಹಲವು ಸಚಿವರ ಮುಖದಲ್ಲಿ ಮಂದಹಾಸ ಇತ್ತು ಎಂಬ ವರದಿ ಇದೆ. ಮುಖ್ಯಮಂತ್ರಿಗಳ ಹಿಂದೆ ಯಾರಿದ್ದಾರೆ ಎಂಬುದಕ್ಕಿಂತ ವಿರುದ್ಧ ಯಾರಿದ್ದಾರೆ ಎಂಬುದು ಇಲ್ಲಿ ಗಮನಿಸಬೇಕಿರುವ ವಿಚಾರ ಎಂದು ಮಾರ್ಮಿಕವಾಗಿ ನುಡಿದರು.

ಕಾಂಗ್ರೆಸ್ಸಿಗರದು ಪಶ್ಚಾತ್ತಾಪದ ಯಾತ್ರೆ, ಭ್ರಷ್ಟಾಚಾರ ರಹಿತ ಆಡಳಿತದ ಭರವಸೆ ನೀಡಿ, ಜನರ ಕಿವಿಗೆ ಹೂವನ್ನು ಇಟ್ಟವರು ಪಶ್ಚಾತ್ತಾಪದ ಯಾತ್ರೆ ಮಾಡುತ್ತಿದ್ದಾರೆ. ಬಿಜೆಪಿ - ಜೆಡಿಎಸ್ ಯಾತ್ರೆ ಯಶಸ್ಸಿಗಾಗಿ ಕಾಂಗ್ರೆಸ್ ಒಂದು ದಿನ ಮುಂಚಿತವಾಗಿ ಆಂದೋಲನ ಹಮ್ಮಿಕೊಂಡಿದೆ ಎಂದು ಲೇವಡಿ ಮಾಡಿದರು.

ಡಿ.ಕೆ.ಶಿವಕುಮಾರ್ ಭ್ರಷ್ಟಾಚಾರದ ಪಿತಾಮಹ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳು ಹಗರಣಗಳಿಗೆ ಉತ್ತರ ಕೊಡಬೇಕು. ಕಾಂಗ್ರೆಸ್ ಸರ್ಕಾರ ರಾಜ್ಯದ ಜನರಿಗೆ ಶಾಪವಾಗಿ ಪರಿಣಮಿಸಿದೆ, ಶಿವಕುಮಾರ್ ಬಾಯಲ್ಲಿ ಭ್ರಷ್ಟಾಚಾರ ಕುರಿತು ಮಾತು ಬರದಿರುವುದೇ ಒಳ್ಳೆಯದು ಎಂದರು.

## ಪಾದಯಾತ್ರೆಗೆ ಅನುಮತಿ

**(1ನೇ ಪುಟದಿಂದ)** ಕೊಂಡೊಯ್ಯಲು ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ನಾಳೆ ನಡೆಸಲು ಉದ್ದೇಶಿಸಿರುವ ಮೈಸೂರು ಚಲೋ ಪಾದಯಾತ್ರೆಗೆ ಅನುಮತಿ ನೀಡಲು ಸರ್ಕಾರ ಕೊನೆಗೂ ಸಮ್ಮತಿಸಿದೆ.

ಈ ಮೊದಲು ಬಿಜೆಪಿ-ಜೆಡಿಎಸ್ ಪಾದಯಾತ್ರೆಗೆ ಅನುಮತಿ ಕೊಡದಿರಲು ಸರ್ಕಾರ ತೀರ್ಮಾನಿಸಿತ್ತು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮ ನಿವೇಶನ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಡಾ. ಪರಮೇಶ್ವರ್, ಆತುರಾತುರವಾಗಿ ರಾಜ್ಯಪಾಲರು ಶೋಕಾಸ್ ನೋಟಿಸ್ ಕೊಟ್ಟಿದ್ದಾರೆ ಎಂಬ ಅನುಮಾನವಿದೆ. ಏಕೆಂದರೆ ಜುಲೈ 26ರಂದು ಟಿ.ಜೆ.ಅಬ್ರಹಾಂ ರಾಜ್ಯಪಾಲರಿಗೆ ಮನವಿ ಕೊಟ್ಟಿದ್ದರು. ದೂರು ಪಡೆದ ದಿನವೇ ನೋಟಿಸ್ ಕಳುಹಿಸಿದ್ದಾರೆ, ಬಹುಶಃ ಒತ್ತಡದಲ್ಲಿ ನೊಟೀಸ್ ಕೊಟ್ಟಿರಬಹುದು ಎನಿಸುತ್ತದೆ ಎಂದರು.

ನೋಟಿಸ್ ಹಿಂಪಡೆಯುವಂತೆ ರಾಜ್ಯಪಾಲರಿಗೆ ಮನವಿ ಮಾಡಿಕೊಳ್ಳುವ ಸಂಪುಟದ ನಿರ್ಣಯವನ್ನು ನಿನ್ನೆ ರಾತ್ರಿಯೇ ರಾಜಭವನಕ್ಕೆ ಕಳುಹಿಸಲು ತೀರ್ಮಾನಿಸಲಾಗಿತ್ತು. ಆದರೆ, ರಾಜ್ಯಪಾಲರು ರಾಜ್ಯದಲ್ಲಿ ಇಲ್ಲದಿರುವ ಹಿನ್ನೆಲೆಯಲ್ಲಿ, ರಾಜಭವನದ ಕಚೇರಿಗೆ ತಲುಪಿಸಿರಬಹುದು ಎಂದು ಹೇಳಿದರು.

ರಾಜ್ಯಪಾಲರ ಪ್ರಶ್ನೆಗಳಿಗೆ ಲಿಖಿತ ರೂಪದಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಈ ಮೊದಲೇ ಉತ್ತರ ನೀಡಿದ್ದಾರೆ. ಈ ಬೆಳವಣಿಗೆ ನಂತರ ರಾಜ್ಯಪಾಲರಿಂದ ಶೋಕಾಸ್ ನೋಟಿಸ್ ಬಂದಿದೆ.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುವುದಿಲ್ಲವೆಂಬ ವಿಶ್ವಾಸವಿದೆ. ಒಂದು ವೇಳೆ ಕೊಟ್ಟರೂ ಅದನ್ನು ಕಾನೂನು ಪ್ರಕಾರ ಎದುರಿಸುತ್ತೇವೆ. ರಾಜ್ಯಪಾಲರು ಏನೇ ನಿರ್ಧಾರ ಕೈಗೊಂಡರೂ ನಾವು ಎದುರಿಸುತ್ತೇವೆ, ಕಾನೂನಾತ್ಮಕ ಹೋರಾಟ ಮಾಡುತ್ತೇವೆ ಎಂದರು.

## ಜಾರಿ ನಿರ್ದೇಶನಾಲಯ ದಾಳಿಗೆ ಯೋಜಿಸಿದೆ : ರಾಹುಲ್

ನವದೆಹಲಿ, ಆ. 2 - ಸಂಸತ್ತಿನಲ್ಲಿ ಚಕ್ರವ್ಯೂಹ ಭಾಷಣ ಮಾಡಿದ ನಂತರ ತಮ್ಮ ವಿರುದ್ಧ ದಾಳಿ ನಡೆಸಲು ಜಾರಿ ನಿರ್ದೇಶನಾಲಯ ಯೋಜಿಸಿದೆ ಎಂದು ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಹೇಳಿದ್ದಾರೆ. ಈ ಹೇಳಿಕೆಯನ್ನು ತಳ್ಳಿ ಹಾಕಿರುವ ಬಿಜೆಪಿ, ವಯನಾಡ್‌ನಲ್ಲಿ ತೀವ್ರ ಸ್ವರೂಪದ ಭೂಕುಸಿತ ಉಂಟಾದ ಬಗ್ಗೆ ತಮ್ಮ ಹೊಣೆಗಾರಿಕೆ ಏನು ಎಂದು ಜನರು ಪ್ರಶ್ನಿಸಬಾರದು ಎಂದು ಗಮನ ಬೇರೆಡೆ ಸೆಳೆಯಲು ಇಂತಹ ಹೇಳಿಕೆ ನೀಡಲಾಗುತ್ತಿದೆ ಎಂದು ಆರೋಪಿಸಿದೆ.

## ತಗ್ಗಿದ ಪ್ರವಾಹ

ಮಲೇಬೆನ್ನೂರು, ಆ.2- ಮಲೆನಾಡಿನಲ್ಲಿ ಆರ್ಭಟಿಸುತ್ತಿದ್ದ ಮುಂಗಾರು ಮಳೆ ಸ್ವಲ್ಪ ತಣ್ಣಗಾಗಿದ್ದು, ತುಂಗಾ ಮತ್ತು ಭದ್ರಾ ನದಿಯಲ್ಲಿ ನೀರಿನ ಹರಿವು ಕೂಡಾ ತಗ್ಗಿದೆ. ತುಂಗಾ ಮತ್ತು ಭದ್ರಾ ಜಲಾಶಯಗಳಿಂದ ಬುಧವಾರ ಮತ್ತು ಗುರುವಾರ ಸುಮಾರು 1.40 ಲಕ್ಷ ಕ್ಯೂಸೆಕ್ಸ್ ನೀರನ್ನು ತುಂಗಭದ್ರಾ ನದಿಗೆ ಬಿಟ್ಟಿದ್ದರಿಂದ ಉಕ್ಕಡಗಾತ್ರಿ - ಫತ್ತೇಪುರ ಸಂಪರ್ಕ ಸೇತುವೆಯ ಜೊತೆಗೆ ಉಕ್ಕಡಗಾತ್ರಿ - ಮಾಳನಾಯಕನಹಳ್ಳಿ ಸಂಪರ್ಕ ಸೇತುವೆಯೂ ನದಿ ಹಿನ್ನೀರಿನಲ್ಲಿ ಜಲಾ ವೃತವಾಗಿತ್ತು. ಅಲ್ಲದೇ ನದಿ ನೀರು ಉಕ್ಕಡಗಾತ್ರಿಗೆ ಜಲ ದಿಗ್ಬಂಧನ ಹಾಕಿತ್ತು. ತುಂಗಭದ್ರಾ ನದಿ ಪಾತ್ರದಲ್ಲಿರುವ ನೂರಾರು ಎಕರೆ ತೋಟ - ಗದ್ದೆಗಳು ನೀರಿನಲ್ಲಿ ಮುಳುಗಿದ್ದವು. ಶುಕ್ರವಾರ ನದಿಯಲ್ಲಿ ನೀರಿನ ಹರಿವು ಕಡಿಮೆ ಆಗಿದ್ದರಿಂದ ಉಕ್ಕಡಗಾತ್ರಿ ಮಾಳನಾಯಕನಹಳ್ಳಿ ಸಂಪರ್ಕ ಸೇತುವೆ ಸಂಚಾರಕ್ಕೆ ಮುಕ್ತವಾಗಿದೆ. ನದಿಯಲ್ಲಿ ಸೃಷ್ಟಿ ಆಗಿದ್ದ ಪ್ರವಾಹ ಭೀತಿ ಕಡಿಮೆ ಆಗಿದ್ದು, ನದಿ ಪಾತ್ರದ ನಗರ, ಪಟ್ಟಣ ಹಾಗೂ ಹಳ್ಳಿಗಳ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

# ಮಲೇಬೆನ್ನೂರಿನ ಬಿ.ಜಿ. ಶಿವರುದ್ರಪ್ಪ ವಯೋ ನಿವೃತ್ತಿ



ಮಲೇಬೆನ್ನೂರು, ಆ. 2 - ಹರಿಹರ ಲೋಕೋಪಯೋಗಿ ಇಲಾಖೆಯ ಕಛೇರಿಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಮಲೇಬೆನ್ನೂರಿನ ಬಿ.ಜಿ. ಶಿವರುದ್ರಪ್ಪ ಅವರು ಬುಧವಾರ ಸೇವೆಯಿಂದ ವಯೋ ನಿವೃತ್ತಿ ಹೊಂದಿದರು.

ಈ ನಿಮಿತ್ತ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಬಿ.ಜಿ. ಶಿವರುದ್ರಪ್ಪ ಅವರನ್ನು ಅವರ ಕಛೇರಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಗುತ್ತಿಗೆದಾರರು ಆತ್ಮೀಯವಾಗಿ ಸನ್ಮಾನಿಸಿ ನಿವೃತ್ತ ಜೀವನಕ್ಕೆ ಶುಭ ಕೋರಿ ಬೀಳ್ಕೊಟ್ಟರು.

ಲೋಕೋಪಯೋಗಿ ಇಲಾಖೆಯ ಎಇಇ ಸುಂದರ್, ಜಿ.ಪಂ. ಎಇಇ ಗಿರೀಶ್, ಸಹಾಯಕ ಇಂಜಿನಿಯರ್ ಸೋಮಾನಾಯ್ಕ್, ಗುತ್ತಿಗೆದಾರರಾದ ಬಿ.ಎಂ. ಜಗದೀಶ್ವರಸ್ವಾಮಿ, ಎ.ಟಿ.ಕೆ. ರಮೇಶ್, ಬಿ.ಕೆ. ಚಂದ್ರಶೇಖರ್, ಬಾನುವಳ್ಳಿ ರುದ್ರೇಶ್, ಕೊಕ್ಕನೂರು ರಾಮಚಂದ್ರಪ್ಪ, ಜಿಗಳಿ ಹನುಮಗೌಡ, ನಿವೃತ್ತ ಶಿಕ್ಷಕರಾದ ಗೋವಿಂದಪ್ಪ ಸಾವಜ್ಜಿ, ಜಿ.ಆರ್. ನಾಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಅವರುಗಳು ಮಾತನಾಡಿ, ಶಿವರುದ್ರಪ್ಪ ಅವರಿಂದಾಗಿ ಮಲೇಬೆನ್ನೂರು ಭಾಗದ ರಸ್ತೆಗಳಿಗೆ ಕಾಯಕಲ್ಪ ಸಿಕ್ಕಿರುತ್ತದೆಂದು ಅವರ ಸೇವೆಯನ್ನು ಕೊಂಡಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿವರುದ್ರಪ್ಪ ಅವರು 2003 ರಲ್ಲಿ ಬ್ಯಾಕ್‌ಲಾಗ್ ಹುದ್ದೆ ಮೂಲಕ ಸರ್ಕಾರಿ ಸೇವೆಗೆ ಸೇರಿ, ಚಳ್ಳಕೆರೆ ಪಿಡಬ್ಲ್ಯೂಡಿ ಕಛೇರಿಯಲ್ಲಿ ನಂತರ ದಾವಣಗೆರೆ ನೀರಾವರಿ ಇಲಾಖೆ ಕಛೇರಿಯಲ್ಲಿ ತದ ನಂತರ ಅಜ್ಜಂಪುರ ಭದ್ರಾ ಮೇಲ್ದಂಡೆ ಯೋಜನೆಯ ಕಛೇರಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ. ಅಭಿವೃದ್ಧಿ ಕಾಣದೇ ನೆನೆಗುದಿಗೆ ಬಿದ್ದಿದ್ದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಆಸಕ್ತಿ ವಹಿಸಿದ ತೃಪ್ತಿ ನನಗಿದೆ ಎಂದರು.

ನಿವೃತ್ತ ಶಿಕ್ಷಕ ಡಿ. ರವೀಂದ್ರಪ್ಪ, ಗುತ್ತಿಗೆದಾರರಾದ ಜಿ.ಪಿ. ಮಂಜುನಾಥ್, ಗೋವರ್ಧನ್ ಸಾವಜ್ಜಿ, ಬಿ.ಸಿ. ರುದ್ರೇಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ನಗರದ ದವನ್ ನೂತನ ಪದವಿ ಪೂರ್ವ ಕಾಲೇಜಿನಲ್ಲಿ ಇಂದು

ದವನ್ ಮತ್ತು ನೂತನ ಪದವಿ ಪೂರ್ವ ಕಾಲೇಜಿನ 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು, ಇಂದು ಸಂಜೆ 4 ಗಂಟೆಗೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಸಿದ್ಧಗಂಗಾ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಜಯಂತ್ ಡಿ.ಎಸ್. ಕಾರ್ಯಕ್ರಮ ಉದ್ಘಾಟಿಸುವರು. ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್. ಪರಶುರಾಮನಗೌಡ ಅಧ್ಯಕ್ಷತೆ ವಹಿಸುವರು. ದವನ್ ಕಾಲೇಜಿನ ವೀರೇಶ್ ಪಟೇಲ್ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಎಸ್. ಹಾಲಪ್ಪ, ಜಿ.ಎಸ್.ಅಂಜು, ಹರ್ಷರಾಜ್ ಎ. ಗುಜ್ಜರ್, ಶ್ರೀಮತಿ ಎಂ.ಇ. ವಾಣಿ, ಶ್ರೀಮತಿ ಅಶ್ವಿನಿ ಹೆಚ್.ಸಿ., ಶ್ರೀಮತಿ ಸುಮಿತ್ರಾ ಕೆ.ಟಿ. ಉಪಸ್ಥಿತರಿರುವರು.

## ಭೂಕುಸಿತ ಎಚ್ಚರಿಕೆ, ಸ್ಥಳಾಂತರಕ್ಕೆ ಬೇಕಿದೆ ನಿಖರ ಮುನ್ಸೂಚನೆ :

# ಮಳೆಯಿಂದ ಆಗುವ ಭೂಕುಸಿತದ ಅಂದಾಜು ಹಾಗೂ ಜನರನ್ನು ತೆರವುಗೊಳಿಸುವಲ್ಲಿ ಸಾಕಷ್ಟು ಕೊರತೆ

ನವದೆಹಲಿ, ಆ. 2 - ಮಳೆಯ ಪ್ರಮಾಣ ಹಾಗೂ ಭೂಕುಸಿತದ ಸಂಭವನೀಯತೆ ಬಗ್ಗೆ ನಿಖರ ಮುನ್ಸೂಚನೆ ನೀಡುವ ವ್ಯವಸ್ಥೆಯ ಅಗತ್ಯವಿದೆ ಎಂದು ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ. ಕೇರಳದ ವಯನಾಡ್ ಹಾಗೂ ಹಿಮಾಚಲ ಪ್ರದೇಶದಲ್ಲಿ ಸಂಭವಿಸಿದ ಅನಾಹುತಗಳ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ವ್ಯವಸ್ಥೆಯ ಚರ್ಚೆಗಳು ಪ್ರಾಮುಖ್ಯತೆ ಪಡೆದುಕೊಂಡಿವೆ.

ವಯನಾಡ್‌ನಲ್ಲಿ ಭೂಕುಸಿತ ಉಂಟಾಗಿದ್ದರೆ, ಹಿಮಾಚಲ ಪ್ರದೇಶದಲ್ಲಿ ಬಿರು ಮಳೆಗೆ ಸಿಲುಕಿ ಐವರು ಸಾವನ್ನಪ್ಪಿದ್ದಾರೆ ಹಾಗೂ 50 ಜನ ಕಣ್ಮರೆಯಾಗಿದ್ದಾರೆ. ಉತ್ತರಾಖಂಡದಲ್ಲಿ ಪ್ರವಾಹಗಳಿಗೆ ಸಿಲುಕಿ 14 ಜನ ಸಾವನ್ನಪ್ಪಿದ್ದಾರೆ. ವಯನಾಡ್‌ನಲ್ಲಿ 48 ಗಂಟೆಗಳಲ್ಲಿ 570 ಮಿ.ಮೀ. ಮಳೆಯಾಗಿ ತೀವ್ರ ಭೂಕುಸಿತ ಸಂಭವಿಸಿತ್ತು.

ಮಳೆಯಲ್ಲಿ ತೀವ್ರ ಏರಿಳಿತ, ತೀವ್ರ ಹವಾಮಾನ ಘಟನೆಗಳು, ಬದಲಾಗುತ್ತಿರುವ ಹವಾಮಾನ ಹಾಗೂ ದುರ್ಬಲವಾದ ಬೆಟ್ಟಗಳ ಹಿನ್ನೆಲೆಯಲ್ಲಿ ನಿಖರ ಮುನ್ಸೂಚನೆ ವ್ಯವಸ್ಥೆಯ ಅಗತ್ಯವಿದೆ.

ಮುನ್ಸೂಚನೆ ವ್ಯವಸ್ಥೆಯಿಂದ ಅನಾಹುತ ಸಂಭವಿಸಬಹುದಾದ ಪ್ರದೇಶಗಳು ಹಾಗೂ ಅಪಾಯ ಎದುರಿಸುವ ಸಮುದಾಯಗಳನ್ನು ಗುರುತಿಸಲು ಸಾಧ್ಯ. ಇದರಿಂದ ಹಾನಿಯನ್ನು ನಿಯಂತ್ರಿಸಬಹುದು ಎಂದು ಸೆಂಟರ್ ಫಾರ್ ಡೆವಲಪ್‌ಮೆಂಟ್ ಅಂಡ್ ಡಿಸಾಸ್ಟರ್ ಮ್ಯಾನೇಜ್ ಮೆಂಟ್ ಸಪೋರ್ಟ್ ಸರ್ವೀಸಸ್‌ನ ನಿಲ್ಮಧಬ್ ಪ್ರುಸ್ಟಿ ಹೇಳಿದ್ದಾರೆ.

ಕೇರಳಕ್ಕೆ ಸಂಬಂಧಿಸಿದಂತೆ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣ ಇಲಾಖೆಯು ಎರಡು ದಿನಗಳ ಮುಂಚೆ ಮುನ್ನೆಚ್ಚರಿಕೆ ನೀಡಿತ್ತು. ಆದರೆ ವಿಕೋಪದ ಸ್ವರೂಪದ ಸ್ಪಷ್ಟತೆ ಇರಲಿಲ್ಲ.

ಕೇರಳ ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರ ಸಹ ಮುನ್ನೆಚ್ಚರಿಕೆ ನೀಡಿತ್ತಾದರೂ, ಸಣ್ಣ ಪ್ರಮಾಣದ ಭೂ ಕುಸಿತ ಸಂಭವಿಸಬಹುದು ಎಂದು ತಿಳಿಸಿತ್ತು.

ಕೇಂದ್ರ ಸರ್ಕಾರದಿಂದ ವ್ಯಾಪಕ ಇಲ್ಲವೇ ಸಾಧಾರಣ ಭೂಕುಸಿತದ ಕುರಿತೂ ಯಾವುದೇ ಮುನ್ನೆಚ್ಚರಿಕೆ ನೀಡಿರಲಿಲ್ಲ ಎಂದು ವಿಕೋಪ ನಿರ್ವಹಣಾ ಪ್ರಾಧಿಕಾರದ ಮಾಧ್ಯಮ ಕಾರ್ಯದರ್ಶಿ ಪಿ.ಎಂ. ಮನೋಜ್ ಹೇಳಿದ್ದಾರೆ.

ಭೂಕುಸಿತದ ಮುನ್ನೆಚ್ಚರಿಕೆ ನೀಡುವ ಕುರಿತು 2020 ರಲ್ಲಿ ಕೇರಳ ಸರ್ಕಾರ ಪ್ರಾಯೋಗಿಕ ಯೋಜನೆಗಳನ್ನು ಆರಂಭಿಸಿತ್ತು. ಆದರೆ, ಇವುಗಳಲ್ಲಿ ಯಾವುದೂ ಪೂರ್ಣಗೊಂಡಿಲ್ಲ.

ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣ ಇಲಾಖೆಯ ಪ್ರಕಾರ ದೇಶದ ಶೇಕಡ 12.6 ರಷ್ಟು ಭಾಗ ಭೂಕುಸಿತ ಪೀಡಿತವಾಗಿದೆ. ಇದರಲ್ಲಿ ಹಿಮಾಲಯದ ರಾಜ್ಯಗಳು, ಈಶಾನ್ಯ ಹಾಗೂ ಪೂರ್ವ ರಾಜ್ಯಗಳು ಮತ್ತು ಪಶ್ಚಿಮ ಘಟ್ಟದ ರಾಜ್ಯಗಳು ಸೇರಿವೆ.

ಮುನ್ಸೂಚನೆಯ ಜೊತೆಗೆ ಜನರನ್ನು ತೆರವುಗೊಳಿಸುವ ಸವಾಲು ಇದೆ. ಕೇರಳ ವಿಕೋಪ ನಿರ್ವಹಣಾ ಪ್ರಾಧಿಕಾರಕ್ಕೆ ಜನರನ್ನು ತೆರವುಗೊಳಿಸಲು ಅಗತ್ಯವಾದ ಸಾಮರ್ಥ್ಯ ಇಲ್ಲ. ಕಳೆದ ಜುಲೈ 29ರಂದು ಬೆಟ್ಟದ ಪ್ರದೇಶಗಳಲ್ಲಿನ ಜನರು ಕಾಳಜಿ ಕೇಂದ್ರಗಳಿಗೆ ತೆರಳುವಂತೆ ಪ್ರಾಧಿಕಾರ ತಿಳಿಸಿತ್ತು. ಆದರೆ ಇಷ್ಟು ತೀವ್ರತೆಯ ಭೂಕುಸಿತದ ಅಂದಾಜು ಜನರಿಗೆ ಇರಲಿಲ್ಲ. ಹೀಗಾಗಿ ಅವರು ಸ್ಥಳಾಂತರಗೊಳ್ಳಲಿಲ್ಲ ಎಂದು ಮನೋಜ್ ಹೇಳಿದ್ದಾರೆ.

2017ರಲ್ಲಿ ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರವು ಭೂಕುಸಿತ ಕುರಿತ ಪ್ರಾಯೋಗಿಕ ಯೋಜನೆಯೊಂದನ್ನು ಆರಂಭಿಸಿತ್ತು. ಆದರೆ ಇದು ಹಿಮಾಲಯದ ರಾಜ್ಯಗಳಿಗೆ ಸೀಮಿತವಾಗಿತ್ತು ಮತ್ತು ಆನಂತರದಲ್ಲಿ ಯಾವುದೇ ಪ್ರಗತಿಯಾಗಿಲ್ಲ ಅಧಿಕಾರಿಯೊಬ್ಬರು ಹೇಳಿದ್ದಾರೆ,

ಮಹಾರಾಷ್ಟ್ರದಲ್ಲಿ ಸತರ್ಕ್ ಎಂಬ ಹೆಸರಿನ ಸಮುದಾಯ ಆಧಾರಿತ ಭೂಕುಸಿತ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಆರಂಭಿಸಲಾಗಿದೆ. ಸಹ್ಯಾದ್ರಿ ವಲಯದ ಭೂಕುಸಿತ ಮುನ್ನೆಚ್ಚರಿಕೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಎರಡು ದಶಕಗಳ ಮಾಹಿತಿಯನ್ನು ಸಂಗ್ರಹಿಸಿ ಮುನ್ನೆಚ್ಚರಿಕೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸತರ್ಕ್ ಮಾದರಿಯು ಶೇಕಡ 76.5 ರಷ್ಟು ನಿಖರತೆ ಹೊಂದಿದೆ ಎಂದು ವರದಿಗಳು ತಿಳಿಸಿವೆ.

ಈಗಿರುವ ಭೂಕುಸಿತ ನಿರ್ವಹಣಾ ಹಾಗೂ ಎಚ್ಚರಿಕೆ ತಂತ್ರಜ್ಞಾನಕ್ಕೆ ಕೋಟ್ಯಂತರ ರೂಪಾಯಿಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕಡಿಮೆ ವೆಚ್ಚದ ಮುನ್ನೆಚ್ಚರಿಕೆ ವ್ಯವಸ್ಥೆಯ ಅಗತ್ಯವನ್ನು ಮನಗಾಣಲಾಗಿದೆ. ಆದರೆ ರಾಷ್ಟ್ರ ಮಟ್ಟದಲ್ಲಿ ಭೂಕುಸಿತ ನಿರ್ವಹಣೆಗೆ ಯಾವುದೇ ಮಾರ್ಗಸೂಚಿ ಇಲ್ಲದಿರುವುದು ರಾಜ್ಯಗಳಿಗೆ ತೊಡಕಾಗಿದೆ ಎಂದು ಪರಿಣಿತರು ಅಭಿಪ್ರಾಯ ಪಡುತ್ತಿದ್ದಾರೆ.


|| ಸಿರಿಗನ್ನಡಂ ಗೆಲ್ಗೆ||

**ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ**

**ಹಾಗೂ**

**ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ (ರಿ.)**

**ದಾವಣಗೆರೆ.**

**ಸ್ಥಾಪಿತ ರಾಜ್ಯಮಟ್ಟದ**

***ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ***

**೨೦೨೪ರ ಪ್ರಶಸ್ತಿ ಪ್ರದಾನ ಸಮಾರಂಭ**

ದಿವ್ಯ ಸಾನ್ನಿಧ್ಯ : **ಪರಮಪೂಜ್ಯ ಯೋಗ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೨೦೦೮ ಜಗದ್ಗುರು ವಚನಾನಂದ ಮಹಾಸ್ವಾಮಿಗಳು**
ವೀರಶೈವ ಲಿಂಗಾಯತ ಪಂಚಮಸಾಲಿ ಪೀಠ, ಸುಕ್ಷೇತ್ರ ಹರಿಹರ, ದಾವಣಗೆರೆ ಜಿಲ್ಲೆ.

ಅಧ್ಯಕ್ಷತೆ : **ಶರಣ ಮಾಗನೂರು ಸಂಗಮೇಶ್ವರ ಗೌಡರು**
ಅಧ್ಯಕ್ಷರು, ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ, ದಾವಣಗೆರೆ.

ಪ್ರಶಸ್ತಿ ಪ್ರದಾನ : **ಪರಮಪೂಜ್ಯರಿಂದ**

ಅಭಿನಂದನಾ ನುಡಿ : **ಶರಣ ಡಾ. ಸಿ. ಸೋಮಶೇಖರ**
ರಾಜ್ಯಾಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪ್ರಶಸ್ತಿ ಪುರಸ್ಕೃತರು : **ಶರಣ ಡಾ. ವೀರಣ್ಣ ಬಿ ರಾಜೂರ**
ವಚನ ಸಾಹಿತ್ಯ ಸಂಶೋಧಕರು, ಧಾರವಾಡ.

ಮುಖ್ಯ ಅತಿಥಿಗಳು : **ಶರಣ ಬಿ. ಸಿ. ಉಮಾಪತಿ**
ಖ್ಯಾತ ಜವಳಿ ಉದ್ಯಮಿಗಳು, ದಾವಣಗೆರೆ.

ಶರಣ ಮಾಗನೂರು ಬಸಪ್ಪನವರ ವ್ಯಕ್ತಿತ್ವ ಕುರಿತು : **ಶರಣ ಡಾ. ಹೆಚ್. ವಿ. ವಾಮದೇವಪ್ಪ**, ಆಡಳಿತಾಧಿಕಾರಿಗಳು,
ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ) ಸಿರಿಗೆರೆ, ಚಿತ್ರದುರ್ಗ (ತಾ) (ಜಿ)

ಪ್ರಾಸ್ತಾವಿಕ ನುಡಿ : **ಶರಣ ಬಿ. ವಾಮದೇವಪ್ಪ**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.

ಅತಿಥಿಗಳು : **ಶರಣ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ**
ನಿಕಟಪೂರ್ವ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.

**ದಿನಾಂಕ : ೦೩-೦೮-೨೦೨೪ರ ಶನಿವಾರ, ಬೆಳಗ್ಗೆ : ೧೧.೦೦ ಗಂಟೆಗೆ**

**ಸ್ಥಳ : ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ-೪.**

**ವಚನ ಗೀತೆ ಹಾಗೂ ನಾಡಗೀತೆ : ಮಾಗನೂರು ಬಸಪ್ಪ ಶಾಲಾ ಮಕ್ಕಳಿಂದ**

**ಸರ್ವರಿಗೂ ಸುಸ್ವಾಗತ**

# ಧರ್ಮಚಿಂತಾಮಣಿ, ಆರೂಢದಾಸೋಹಿ ಶರಣ ಮಾಗನೂರು ಬಸಪ್ಪನವರು

ದಾವನಗಿರಿಯ ಸಮಾಜಸೇವೆಯ ಸಾಕಾರಮೂರ್ತಿ, ಕಾಯಕಯೋಗಿ, ಆರೂಢದಾಸೋಹಿ, ಧರ್ಮಚಿಂತಾಮಣಿ, ವಚನವಾಚಕ, ಜೀವನೋತ್ಸಾಹದ ಚಿಲುಮೆ, ಸಮಯ ಪರಿಪಾಲಕ, ಶಿವಮಂತ್ರ ಜಪಸ್ತ, ಗುರುಭಕ್ತ, ಹಾಗೂ ದೈವಭಕ್ತರಾದ ಶರಣ ಮಾಗನೂರು ಬಸಪ್ಪನವರ ಪರಿಚಯ ಗೊತ್ತಿಲ್ಲದೇ ಇರುವವರು ವಿರಳ. ಇಂದಿನ ಯುವ ಮನಸ್ಸುಗಳಿಗೆ, ಸಮಾಜಸೇವೆಗೆ ಹೆಜ್ಜೆ ಇಡುವವರಿಗೆ ಇವರು ಪಠ್ಯ ಪುಸ್ತಕ. ಅವರ ಜೀವನ ಕೃತಿಯ ಅನುಸರಣೆ, ತತ್ವಗಳ ಅನುಷ್ಠಾನ ಆರೋಗ್ಯವಂತ ಸಮಾಜಕ್ಕೆ ಮೈಲುಗಲ್ಲುಗಳಾಗಬಹುದು.

ಜನ ಸಾಮಾನ್ಯರಂತೆ ಇದ್ದು, ವ್ಯಾಪಾರ-ವಾಣಿಜ್ಯ ಚಟುವಟಿಕೆಗಳ ಕಾರ್ಯಗಳಲ್ಲಿ ನೀತಿ-ತತ್ವಗಳನ್ನು ಮೈಗೂಡಿಸಿಕೊಂಡು, ಬದುಕಿ ಮಹಾನ್ ಶ್ರೇಷ್ಠರೆನಿಸಿದರು. ಅವರನ್ನು ದಾವಣಗೆರೆಯ 'ಗಾಂಧಿ' ಎಂದರೆ ತಪ್ಪಾಗದು. ಏಕೆಂದರೆ ಗಾಂಧೀಜಿ ಹರಿಜನರನ್ನು ಪ್ರೀತಿಸಿದರು, ಬಸಪ್ಪನವರು ಹರಿಜನರಿಗೆ ವಿದ್ಯಾಭ್ಯಾಸಕ್ಕಾಗಿ ಶಾಲೆ-ಹಾಸ್ಟೆಲ್‌ಗಳನ್ನು ಸ್ಥಾಪಿಸಿ ಮಾನವೀಯತೆ ಮೆರೆದರು.

**ಸ್ವಾಭಿಮಾನಿಯಾಗಿ ಬದುಕು ನಡೆಸಿದ ಶರಣ ಬಸಪ್ಪ:**

ಬಾಲ್ಯದಲ್ಲಿಯೇ ನೀತಿ ಅಳವಡಿಸಿಕೊಂಡು ಬಡತನದ ಬೇಗೆಯಲ್ಲಿಯೂ ಸ್ವಾಭಿಮಾನಿಯಾಗಿ ಜೀವನ ಸಾಗಿಸಬೇಕೆಂಬ ಛಲದಿಂದ ಅವರು ಬದುಕು ನಡೆಸಿದ ರೀತಿ, ಅನುಭವಿಸಿದ ಕಷ್ಟ-ನಷ್ಟಗಳು ಒಂದು 'ಸಿನಿಮಾ' ಮಾಡಲು ಯೋಗ್ಯ ಕಥಾ ವಸ್ತುಗಳು. ವಾರಕ್ಕೆ 'ಮೂರು ರೂಪಾಯಿ' ಪಗಾರದಿಂದ ವಾರಕ್ಕೆ 50 ರೂಪಾಯಿ ಆಗುವವರೆಗೆ ವಿವಿಧ ಅಂಗಡಿಗಳಲ್ಲಿ ದಶಕಗಳ ಕಾಲ (1918-1928) ಗುಮಾಸ್ತನಾಗಿ, ಸೇವಕನಾಗಿ ದುಡಿದರು. ತಮ್ಮ 30ನೇ ವಯಸ್ಸಿನಲ್ಲಿ 100 ರೂಪಾಯಿ ಬಂಡವಾಳದೊಂದಿಗೆ ಸ್ವಂತ ವ್ಯಾಪಾರ ಆರಂಭಿಸಿ, ಬದುಕಿನಲ್ಲಿ ಒಂದೊಂದೆ ಹೆಜ್ಜೆ ಇಡುತ್ತಾ ಬಹುದೊಡ್ಡ ವ್ಯಾಪಾರಿಯಾಗಿ, ವರ್ತಕರಾಗಿ ಅತ್ಯಧಿಕ



ಪ್ರಸ್ತುತ ಮಾಗನೂರು ಬಸಪ್ಪನವರಂತಹ ಪುಣ್ಯ ಪುರುಷರ ಸ್ಮರಣೆ ತೀರ ಅವಶ್ಯಕವೂ ಹಾಗೂ ಅನಿವಾರ್ಯವೂ ಹೌದು. ಅವರ ವ್ಯಕ್ತಿ ಪರಿಚಯಕ್ಕಿಂತ ತತ್ವ, ಮೌಲ್ಯಗಳ ಪರಿಚಯ, ಸೇವೆಯ ಮುಖಗಳು, ನೀತಿ-ಸಂಸ್ಕಾರಗಳು ಜನಸಮುದಾಯಕ್ಕೆ ಅವರ ಮಾರ್ಗದರ್ಶನ, ಬದುಕಿನ ಕ್ರಮಗಳು, ಸತ್ಕಾರ್ಯಗಳಲ್ಲಿ ಜೀವನೋತ್ಸಾಹ, ಸಹೃದಯತೆ, ಹೃದಯ ವೈಶಾಲ್ಯತೆ, ಕಾರ್ಯ ನಿಷ್ಠೆ, ಮಾನವ ಪ್ರೇಮ ಹೀಗೆ ಗಮನಿಸುತ್ತಾ ಹೋದರೆ ಅವರು ಒಬ್ಬ ವ್ಯಕ್ತಿಯಾಗದೇ ಶಕ್ತಿಯಾಗಿ ಕಾಣುತ್ತಾರೆ. ಪೂಜ್ಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳುವಂತೆ 'ಮಾಗನೂರು ಬಸಪ್ಪನವರೆಂದರೆ ಒಂದು ಸಂಸ್ಥೆ ಇದ್ದಂತೆ' ಎನ್ನುತ್ತಾರೆ.

ಪರಿಶ್ರಮದಿಂದ, ನಿಷ್ಠೆ, ಬದ್ಧತೆ, ಪ್ರಮಾಣಿಕ ಕಾಯಕದೊಂದಿಗೆ ದಾವಣಗೆರೆಯಲ್ಲಿ ತಮ್ಮನ್ನು ಗುರುತಿಸಿಕೊಂಡರು. ಬಂದ ಕಾಯಕದ ಪ್ರತಿಫಲವು ತಮ್ಮ ಕುಟುಂಬ ವರ್ಗಕ್ಕೆ ಮಾತ್ರ ಸೀಮಿತಗೊಳಿಸದೇ ಸಮಾಜಮುಖಿ ಕಾರ್ಯಗಳಿಗೆ ವಿನಿಯೋಗಿಸಿದರು. ಧರ್ಮ ಚಿಂತಾಮಣಿ, ಆರೂಢದಾಸೋಹಿ ಎಂಬ ಹೆಸರು ಪಡೆದರು.

**ಶರಣ ಬಸಪ್ಪನವರ ಸಮಾಜಮುಖಿ ಕಾರ್ಯಗಳು:**

● ಕಾಂಗ್ರೆಸ್ ಚಳವಳಿಯಲ್ಲಿ 1930ರಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಹಾತ್ಮ ಗಾಂಧೀಜಿಯವರ ಸಂಪರ್ಕಕ್ಕೆ ಬಂದರು.

● ಕಾಂಗ್ರೆಸ್ ಮೈಸೂರು ಸ್ಟೇಟ್ ಕಾನ್ಫರೆನ್ಸ್ 1934ರಲ್ಲಿ ಆಯೋಜನೆ ಮಾಡಿ ಅದರ ಖಜಾಂಚಿಯಾಗಿ ಕಾರ್ಯನಿರ್ವಹಿಸಿ, ಎಸ್. ನಿಜಲಿಂಗಪ್ಪ, ಡಾ. ಬಾಬು ರಾಜೇಂದ್ರ ಪ್ರಸಾದ್ ರವರ ಮೆಚ್ಚುಗೆಗೆ ಪಾತ್ರರಾದರು.

● ಚಲೇಜಾವ್, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ 1942ರಲ್ಲಿ ಭಾಗವಹಿಸಿ, ತಮ್ಮ ಸ್ವಂತ ದುಡಿಮೆಯ 'ಹತ್ತು ಸಾವಿರ' ರೂಪಾಯಿಗಳನ್ನು ಖರ್ಚುಮಾಡಿ ಧರ್ಮಚಿಂತಾ ಮಣಿ ಅನ್ನಿಸಿಕೊಂಡರು. ಈ ಭಾಗದಿಂದ ಸ್ವತಂತ್ರ ಹೋರಾಟದಲ್ಲಿ ಭಾಗಿಯಾದವರಿಗೆ ಪ್ರೋತ್ಸಾಹ, ಅವರ ಕುಟುಂಬ ವರ್ಗಕ್ಕೆ ಆರ್ಥಿಕ ನೆರವು ನೀಡಿದ ಮಹಾತ್ಮ ಇವರು.

● ಹನ್ನೆರಡು ವರ್ಷಗಳ ಕಾಲ (1942-1954) ದಾವಣಗೆರೆ ನಗರದ ಮುನ್ಸಿಪಲ್ ಕೌನ್ಸಿಲರ್ ಆಗಿ ಅನೇಕ ಜನಪರ ಅಭಿವೃದ್ಧಿ ಕೆಲಸಗಳನ್ನು ಮಾಡಿ ಜನತೆಯಿಂದ ಸೈ-ಎನ್ನಿಸಿಕೊಂಡರು, ಮುನಿಸಿಪಲ್ ಸೊಸೈಟಿ ಆರಂಭಿಸಿ, ನಗರಸಭೆ ಕಟ್ಟಡ ನಿರ್ಮಾಣಕ್ಕೆ ಕಾರಣ ಶಕ್ತಿ ಇವರಾದರು.

**ಸಂಘ-ಸಂಸ್ಥೆಗಳ ಸ್ಥಾಪನೆಯ ಜನಾನುರಾಗಿ:**

● ದಾವಣಗೆರೆ ನಗರದಲ್ಲಿ ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಜನಾನುರಾಗಿಯಾದರು. ನಗರದಲ್ಲಿ ಎಜ್ಯುಕೇಶನ್ ಅಸೋಸಿಯೇಷನ್ 1937ರಲ್ಲಿ ಆರಂಭಿಸಿ, ಆಗಿನ ಸಂದರ್ಭಕ್ಕೆ 75 ಸಾವಿರ ರೂಪಾಯಿಗಳ ವಂತಿಕೆ ನೀಡಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಈ ಭಾಗದ ಮಕ್ಕಳಿಗೆ ಅಕ್ಷರ ದಾಸೋಹ ಆರಂಭಿಸಿದ ಕೀರ್ತಿ ಶರಣ ಮಾಗನೂರು ಬಸಪ್ಪನವರದು.

● ಅಶಕ್ತ ಪೋಷಕರ ಸಂಘವನ್ನು 1938ರಲ್ಲಿ ಆರಂಭಿಸಿ ದಾವಣಗೆರೆಗೆ ಶಿಕ್ಷಣಕ್ಕೆ ಬರುವ ಗ್ರಾಮೀಣ ಬಡವರ, ದೀನ-ದಲಿತರ ಮಕ್ಕಳಿಗೆ ಉಚಿತ ಊಟ, ವಸತಿ ಏರ್ಪಾಟು ಮಾಡಿದ ಕರುಣೆಯ ಸಾಕಾರಮೂರ್ತಿಯಾದರು.

● ದಾವಣಗೆರೆ ವರ್ತಕರ ಸಂಘವನ್ನು 1934ರಲ್ಲಿ ಆರಂಭಿಸಿ 20 ವರ್ಷ ಅದರ ಅಧ್ಯಕ್ಷರಾಗಿ ರಾಜ್ಯ ವರ್ತಕರ ಸಮ್ಮೇಳನ ಆಯೋಜನೆ, ಅನೇಕ ಜನಪರ ಕೆಲಸ ಆರಂಭಿಸಿ ವರ್ತಕರ ವಲಯದಲ್ಲಿ ಬಹುದೊಡ್ಡ ಹೆಸರನ್ನು ಪಡೆದು ಜನಾನುರಾಗಿಯಾದರು.

● ನಗರದ ಛೇಂಬರ್ ಆಫ್ ಕಾಮರ್ಸ್‌ನಲ್ಲಿ 1941 ರಿಂದ 1991ರ ವರೆಗೆ ವಿವಿಧ ಹುದ್ದೆಗಳನ್ನು ಆಲಂಕರಿಸಿ ವರ್ತಕರ, ಕೈಗಾರಿಕೋದ್ಯಮಿಗಳ ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ಧ್ವನಿಯಾಗಿ 'ಕಾಯಕ' ನಿರ್ವಹಿಸಿದರು.

● ದಾವಣಗೆರೆ ಅರ್ಬನ್ ಸಹಕಾರಿ ಬ್ಯಾಂಕನ್ನು ತಮ್ಮ ಸ್ವಂತ ಷೇರು ಹಣ ಹಾಕಿ 1961ರಲ್ಲಿ ಆರಂಭಿಸಿ, ಅದರ ನಿರ್ದೇಶಕರಾಗಿ ದಶಕಗಳ ಕಾಲ ದುಡಿದು ನಗರದ ಜನರಿಗೆ ಆರ್ಥಿಕ ಅನುಕೂಲ ಕಲ್ಪಿಸಿದರು.

● ಬಾಪೂಜಿ ಸಹಕಾರಿ ಬ್ಯಾಂಕ್ 1970ರಲ್ಲಿ 1974 ರಲ್ಲಿ ಶಿವ ಸಹಕಾರಿ ಬ್ಯಾಂಕ್ ಆರಂಭಿಸಿ ಅವುಗಳ ಅಧ್ಯಕ್ಷರಾಗಿ, ಆರ್ಥಿಕ ಪ್ರಗತಿಯ ಒಳಿತಿಗಾಗಿ ಕಾರ್ಯ ನಿರ್ವಹಿಸಿದ್ದರು.

● ಶಿವ ಫೈನಾನ್ಸ್ ಕಾರ್ಪೋರೇಷನ್ 1977ರಲ್ಲಿ ಆರಂಭಿಸಿ, ವ್ಯವಸ್ಥಾಪಕ ನಿರ್ದೇಶಕರಾಗಿ ಈ ಸಂಸ್ಥೆ ನಗರದಲ್ಲಿ ಹೆಸರು, ಕೀರ್ತಿ ಸಂಪಾದಿಸುವಲ್ಲಿ ಇವರ ಸೇವೆ ಸ್ಮರಣೀಯ.

● ಗಣೇಶ ಟೆಕ್ಸ್‌ಟೈಲ್ ಮಿಲ್ ಆರಂಭಿಸಿ ಎರಡು ದಶಕಗಳ ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿದರು.

● ದಾವಣಗೆರೆ ನಗರದಲ್ಲಿ ಹರಿಜನ ಹಾಸ್ಟೆಲ್ (1942) ಛಲವಾದಿ ಹಾಸ್ಟೆಲ್ (1975) ನಾಯಕರ, ಭೋವಿ ಹಾಸ್ಟೆಲ್ (1975) ಗಳನ್ನು ಆರಂಭಿಸಿ ತಮ್ಮ ದುಡಿಮೆಯ ಹಣದಿಂದ 70 ಸಾವಿರಕ್ಕಿಂತಲೂ ಹೆಚ್ಚು ಹಣ ಖರ್ಚುಮಾಡಿ ದೀನ-ದಲಿತರ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಿದರು.

● ದಾವಣಗೆರೆ ನಗರದಲ್ಲಿ ವಿದ್ಯಾ ಸಂಸ್ಥೆಗಳ ಕೊರತೆ ಇತ್ತು, ಹೀಗಾಗಿ 1958ರಲ್ಲಿ ಬಾಪೂಜಿ ವಿದ್ಯಾ ಸಂಸ್ಥೆ ಆರಂಭಿಸಿ, ಡಿ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ಮೆಡಿಕಲ್ ಕಾಲೇಜು, ಎ.ವಿ.ಕೆ. ಕಾಲೇಜು, ಲಾ-ಕಾಲೇಜು, ಎಂ.ಎಸ್.ಬಿ. ಕಾಲೇಜುಗಳನ್ನು ಆರಂಭಿಸಿ ನಗರವನ್ನು 'ಶಿಕ್ಷಣ ನಗರಿ' ಯನ್ನಾಗಿ ಮಾಡಿದ ಕೀರ್ತಿ ಮಾಗನೂರು ಬಸಪ್ಪನವರದು.

**ಸಿರಿಗೆರೆ ಬೃಹನ್ಮಠದ ಪರಮಾತ್ಮ ಭಕ್ತರು:**

ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳ ಆಪ್ತ ಶಿಷ್ಯರಾಗಿ ಶ್ರೀ ಮಠದ ಶ್ರೇಯೋಭಿವೃದ್ಧಿಗೆ ದುಡಿದರು. 1975ರಲ್ಲಿ ನಡೆದ ತರಳಬಾಳು ಹುಣ್ಣಿಮೆ ಕಾರ್ಯಕ್ರಮ ಜಗಳೂರಿನಲ್ಲಿ ಯಶಸ್ವಿಯಾಗಿ ನಡೆಯಲು ಇವರ ಸೇವೆ ಸ್ಮರಣೀಯ.

● ದಾವಣಗೆರೆಯ ಅನುಭವ ಮಂಟಪಕ್ಕೆ 15 ಎಕರೆ 23 ಗುಂಟೆ ಜಮೀನನ್ನು ದಾಸೋಹಾರ್ಥ ನೀಡಿ ಅದರ ಕಟ್ಟಡ ಕಾರ್ಯಕ್ಕೆ ತಮ್ಮ ಸ್ವಂತ ಜಮೀನು ಮಾರಾಟ ಮಾಡಿ 92 ಸಾವಿರ ರೂಪಾಯಿಗಳನ್ನು ಕಟ್ಟಡ ನಿಧಿಗೆ ಸಮರ್ಪಿಸಿದ್ದಾರೆ.

● ಹಳೆ ಸಿರಿಗೆರೆ ಹಾಸ್ಟೆಲ್ ಆರಂಭಿಸಿ ಅದಕ್ಕಾಗಿ 30 ಸಾವಿರ ರೂಪಾಯಿ ಖರ್ಚು ಮಾಡಿದರು. ವಿದ್ಯಾರ್ಥಿ ನಿಲಯದ ಹೊರ ಆವರಣದಲ್ಲಿ 22 ಮಳಿಗೆಗಳನ್ನು ಕಟ್ಟಿಸಿದ್ದಾರೆ.

● ಗುರುಶಾಂತ ಸ್ವಾಮೀಜಿ ಹಾಸ್ಟೆಲ್ 1946ರಲ್ಲಿ ಆರಂಭಿಸಿ, ಅದಕ್ಕೆ ಸಮಾಜದ ಭಕ್ತರಿಂದ 6 ಲಕ್ಷ ರೂಪಾಯಿ ಸಂಗ್ರಹಿಸಿ ಮೂರು ಅಂತಸ್ತಿನ ಕಟ್ಟಡ ನಿರ್ಮಿಸಿದ್ದಾರೆ.

**ಶರಣ ಬಸಪ್ಪನವರ ಹೆಸರಲ್ಲಿ ರಾಜ್ಯ ಪ್ರಶಸ್ತಿ:**

ಮಾಗನೂರು ಬಸಪ್ಪನವರ ಹೆಸರಿನಲ್ಲಿ ಅವರ ಪುತ್ರ ಸಂಗಮೇಶ್ವರಗೌಡ್ರು ಮತ್ತು ಅವರ ಕುಟುಂಬ ವರ್ಗದವರು ಬಸಪ್ಪನವರ ಹೆಸರನ್ನು ಜನ-ಮಾನಸದಲ್ಲಿ ಶಾಶ್ವತವಾಗಿರಿಸಲು ರಾಜ್ಯ ಮಟ್ಟದ ಪ್ರಶಸ್ತಿಯನ್ನು 2014 ರಲ್ಲಿಯೇ ಆರಂಭಿಸಿದ್ದು ಸ್ವರಣೀಯ ಕಾರ್ಯ. ಈ ಗೌರವ ಪ್ರಶಸ್ತಿಯನ್ನು ಪ್ರತಿ ವರ್ಷ ಮಹನೀಯರನ್ನು ಗುರುತಿಸಿ ನೀಡಲಾಗುತ್ತಿದೆ. 2024ರ ಪ್ರಶಸ್ತಿಯನ್ನು ಡಾ. ವೀರಣ್ಣ ಬಿ. ರಾಜೂರ ರವರಿಗೆ ನೀಡಲಾಗುತ್ತಿದೆ.

- **ಡಾ. ಗಂಗಾಧರಯ್ಯ ಹಿರೇಮಠ,** ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ. ಮೊ: 9880093613

## ಆಸ್ತಿ ತೆರಿಗೆ ಸುಸ್ತಿದಾರರ ಒಟಿಎಸ್ ಕಾಲಾವಧಿ 31ರವರೆಗೆ ವಿಸ್ತರಣೆ

**(1ನೇ ಪುಟದಿಂದ)** ತೊಂದರೆಯಾಗದ ರೀತಿಯಲ್ಲಿ ಕೆಲವು ಬದಲಾವಣೆ ಮಾಡಲಾಗುವುದು. ಒಂದು ವೇಳೆ ಹೆಚ್ಚಿಗೆ ಹಣ ಪಾವತಿಸಿದ್ದರೆ, ಮುಂದಿನ ಬಾರಿ ಆಸ್ತಿ ತೆರಿಗೆ ಪಾವತಿ ವೇಳೆ ಅದನ್ನು ಸರಿಹೊಂದಿಸಲಾಗುವುದು. ಈ ವಿಚಾರದಲ್ಲಿ ಅನಗತ್ಯ ಆತಂಕ ಬೇಡ ಎಂದರು.

ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ-ಜಿಡಿಎಸ್ ಪಾದಯಾತ್ರೆಗೆ ಅರ್ಥ ಅಥವಾ ವಿಷಯ ಯಾವುದೂ ಇಲ್ಲ. ಅವರ ಕಾಲದಲ್ಲಿ ನಡೆದಿರುವ ಹಗರಣಗಳ ಬಯಲು ಮಾಡಲು ನಮಗೆ ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಯಾವುದಾದರೂ ಹೊಸ ಹಗರಣಗಳಿದ್ದರೆ ಹೇಳಲಿ. ರಾಜ್ಯದ ಇತಿಹಾಸದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಎಂದರೆ ಅದು ಬಿಜೆಪಿ ಸರ್ಕಾರ. ಅವರ ಕಾಲದ ಹಗರಣಗಳ ಬಗ್ಗೆ ಹಾಗೂ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ಪ್ರತಿನಿತ್ಯ ಮೂರ್ನಾಲ್ಕು ಪ್ರಶ್ನೆ ಕೇಳುತ್ತೇವೆ, ಉತ್ತರ ನೀಡಲಿ ಎಂದು ಸವಾಲು ಹಾಕಿದರು.

ಪಾದಯಾತ್ರೆ ಮೂಲಕ ನೆಲೆ ಕಳೆದುಕೊಳ್ಳುವುದನ್ನು ಉಳಿಸಿಕೊಳ್ಳಲು ಜೆಡಿಎಸ್ ನಾಯಕರು ಪ್ರಯತ್ನಿಸಿದರು. ಆದರೆ ಅವರನ್ನು ಹೆದರಿಸಿ, ಬೆದರಿಸಿ ಪಾದಯಾತ್ರೆಗೆ ಒಪ್ಪಿಸಿದ್ದಾರೆ. ಅವರು ಏನಾದರೂ ಮಾಡಿಕೊಳ್ಳಲಿ, ಅದು ಅವರವರ ವಿಚಾರ, ಅವರ ಒಪ್ಪಿಗೆಯ ಗುಟ್ಟು ಏನೆಂದು ಅವರನ್ನೇ ಕೇಳಿ ಎಂದರು.

ಇ.ಡಿ. ದಾಳಿಗೆ ಚಹಾ, ಬಿಸ್ಕೆಟ್‌ನೊಂದಿಗೆ ಸಿದ್ಧತೆ ಮಾಡಿಕೊಂಡು ಕಾಯುತ್ತಿದ್ದೇನೆ ಎಂಬ ರಾಹುಲ್ ಗಾಂಧಿ ಟ್ವೀಟ್‌ಗೆ ಪ್ರತಿಕ್ರಿಯಿಸಿ, ಈ ಕುರಿತು ಮಾಹಿತಿ ಇಲ್ಲ, ಅವರು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರು, ಅವರದೇ ಆದ ಮಾಹಿತಿ ಪಡೆದಿರುತ್ತಾರೆ.

ಸಂವಿಧಾನಿಕ ಸಂಸ್ಥೆಗಳು ಯಾವ ರೀತಿ ವರ್ತಿಸುತ್ತಿವೆ ಎಂಬುದನ್ನು ಎಲ್ಲರೂ ನೋಡುತ್ತಿದ್ದೀರಿ, ತನಿಖೆ ಹೆಸರಲ್ಲಿ ಅಧಿಕಾರಿಗಳಿಗೆ ಒತ್ತಡ ಹಾಕಿ, ಮುಖ್ಯಮಂತ್ರಿ ಹಾಗೂ ನನ್ನ ಹೆಸರು ಹೇಳುವಂತೆ ಬೆದರಿಸುವುದು ನಡೆಯುತ್ತಿದೆ.

ಸಿಬಿಐ ಏನೇನು ಮಾಡುತ್ತಿದೆ ಎಂಬ ಪಟ್ಟಿ ನನ್ನ ಬಳಿ ಇದೆ, ನಿಧಾನವಾಗಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದರು.

## ಆ.1 ರಾಷ್ಟ್ರೀಯ ಬಾಯಿ ಶುಚಿತ್ವ ದಿನ...

**ಡಾ|| ಭೂಮಿಕಾ ರಾವ್ ಎಸ್., ಡಾ|| ಅನುಷಾ ಕೆ., ಡಾ|| ಮಂಜುಶ್ರೀ ಪಿ., ಡಾ|| ಶೃತಿ ಎಸ್. ಪಾಟೀಲ್, ಡಾ|| ಟಿಫಾನಾ ಫಾತಿಮಾ ಎಚ್., ಡಾ|| ಜೆನ್ನಿ ಜಾರ್ಜ್**
ಸ್ನಾತಕೋತ್ತರ ವಿದ್ಯಾರ್ಥಿಗಳು, ವಸಡು ರೋಗ ಶಸ್ತ್ರಚಿಕಿತ್ಸಾ ವಿಭಾಗ, ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ , ದಾವಣಗೆರೆ.

ಭಾರತ ದೇಶದಲ್ಲಿ ಡಾ. ಜಿ.ಬಿ. ಶಾಂಕ್ವಾಲ್ಕರ್ ಅವರ ಜನ್ಮದಿನದ ನೆನಪಿಗಾಗಿ ಆಗಸ್ಟ್ 1 ರಂದು ರಾಷ್ಟ್ರೀಯ ಬಾಯಿ ಶುಚಿತ್ವ ದಿನ ಎಂದು ಆಚರಿಸಲಾಗುತ್ತದೆ. ಇಂಡಿಯನ್ ಸೊಸೈಟಿ ಆಫ್ ಪೆರಿಯೋಡಾಂಟಲಜಿಯ ಸಂಸ್ಥಾಪಕರಾದ ಡಾ. ಜಿ.ಬಿ ಶಾಂಕ್ವಾಲ್ಕರ್‌ರನ್ನು ಭಾರತೀಯ ಪೆರಿಯೋಡಾಂಟಿಕ್ಸ್ ಡಯೋನ್ ಎಂದು ಪರಿಗಣಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು 2022 ರಲ್ಲಿ ಬಿಡುಗಡೆ ಮಾಡಿದ ವರದಿಯ ಪ್ರಕಾರ ಭಾರತದಲ್ಲಿ ಶೇಕಡ 9.8ರಷ್ಟು ಜನರಲ್ಲಿ ತುಟಿ ಮತ್ತು ಬಾಯಿಯ ಅರ್ಬುದ ರೋಗಕ್ಕೆ ಗುರಿಯಾಗುವ ಸಾಧ್ಯತೆ ಇದೆ ಎಂದು ಪ್ರಸ್ತುತ ಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬಹುತೇಕ ಮಂದಿಯಲ್ಲಿ ವಸಡಿನ ತೊಂದರೆ ಸಾಮಾನ್ಯವಾಗಿದೆ. ಇದಕ್ಕೆ ಪ್ರಮುಖ ಕಾರಣ ಬಾಯಿಯ ಅಸ್ವಚ್ಛತೆ. ಹೃದ್ರೋಗದ ಕಾಯಿಲೆ, ಮಧುಮೇಹ, ಶ್ವಾಸಕೋಶದ ಸೋಂಕುಗಳು ಮತ್ತು ಬುದ್ಧಿಮಾಂದ್ಯತೆ ಸೇರಿದಂತೆ ಹಲವಾರು ಪರಿಸ್ಥಿತಿಗಳೊಂದಿಗೆ ಈ ವಸಡಿನ ತೊಂದರೆ ತೀವ್ರತೆಯನ್ನು ಹೆಚ್ಚಿಸುತ್ತದೆ. ಇದರ ಪರಿಣಾಮದಿಂದ ಆರಂಭಿಕ ಹಂತಗಳಲ್ಲಿ ವಸಡುಗಳು ಊದಿಕೊಳ್ಳುವುದು. ಕೆಂಪು ಬಣ್ಣ ಹೊಂದುವುದು ಮತ್ತು ಸುಲಭವಾಗಿ ರಕ್ತ ಸ್ರಾವ ಆಗಬಹುದು. ಈ ಹಂತವನ್ನು ಜಿಂಜಿವೈಟಿಸ್ ಎಂದು ಕರೆಯುತ್ತಾರೆ. ಚಿಕಿತ್ಸೆ ನೀಡದೇ ಹೋದಲ್ಲಿ ಜಿಂಜಿವೈಟಿಸ್ ಮುಂದಿನ ಹಂತಕ್ಕೆ ತಿರುಗಬಹುದು. ಇದನ್ನು ಪೆರಿಯೋಡಾಂಟೈಟಿಸ್ ಎಂದು ಕರೆಯುತ್ತಾರೆ.

**ಪೆರಿಯೋಡಾಂಟೈಟಿಸ್ ರೋಗದ ಗುಣ ಲಕ್ಷಣಗಳು:**

● ವಸಡು ಮತ್ತು ಹಲ್ಲಿನ ಅಂತರ ಜಾಸ್ತಿಯಾಗುವುದು.

● ವಸಡಿನಲ್ಲಿ ಪದೇ ಪದೇ ರಕ್ತ ಬರುವುದು ಹಾಗೂ ಕೀವು ತುಂಬಿಕೊಳ್ಳುವುದು.

● ಹಲ್ಲುಗಳ ಮಧ್ಯೆ ಆಹಾರ ಸಿಕ್ಕಿಕೊಂಡು ವಸಡಿನಲ್ಲಿ ಕಡಿತ ಕಾಣಿಸಿ, ಚೂಪಾದ ವಸ್ತುವಿನಿಂದ ಚುಚ್ಚಿದಾಗ ಸಮಾಧಾನವೆನಿಸುವುದು.

● ಹಲ್ಲುಗಳ ಮಧ್ಯೆ ಕಿಂಡಿ ಬಿಟ್ಟು ಬಾಯಿಯಿಂದ ದುರ್ವಾಸನೆ ಬರುವುದು.

● ಬಿಸಿ ಮತ್ತು ತಣ್ಣನೆಯ ಆಹಾರ ಸೇವಿಸಿದಾಗ ಹಲ್ಲು ಜುಮ್ಮೆನ್ನುವುದು.

● ವಸಡಿನ ಮೂಳೆಯು ಸವೆಯಬಹುದು.

● ಕೊನೆಯದಾಗಿ ಹಲ್ಲು ತನ್ನಷ್ಟಕ್ಕೆ ತಾನೇ ಸಡಿಲಗೊಂಡು ಉದುರುವುದು.

ಮೇಲಿನ ಎಲ್ಲ ಪರಿಣಾಮಗಳಿಂದ ಹಲ್ಲುಗಳನ್ನು ಕಳೆದುಕೊಂಡಾಗ ಇದರ ನಷ್ಟವು ವಯಸ್ಕರಲ್ಲಿ ಆರೋಗ್ಯ ಸಂಬಂಧಿತ ಜೀವನದ ಗುಣಮಟ್ಟವನ್ನು ಕಡಿಮೆ ಮಾಡುತ್ತದೆ. ಇದು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಈ ರೋಗದಿಂದ ಕೇವಲ ಹಲ್ಲುಗಳು ಮಾತ್ರ ಹಾಳಾಗುವುದಿಲ್ಲ ಬದಲಿಗೆ ಸಾಮಾನ್ಯ ಆಂತರಿಕ ಆರೋಗ್ಯದ ಮೇಲೆ ಪರಿಣಾಮ ಬೀರಿ ವ್ಯಕ್ತಿಯ ರೋಗ ಪ್ರತಿರೋಧಕ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ವಸಡು ರೋಗವು ತೀವ್ರವಾದಾಗ ಪೆರಿಯೊಡಾಂಟೈಟಿಸ್ ರೋಗದ ಚಿಕಿತ್ಸೆಗಾಗಿ ಜನರು ಬಂದರೆ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲು ಕಷ್ಟವಾಗುತ್ತದೆ. ಚಿಕಿತ್ಸೆಗೆ ತಗಲುವ ಸಮಯ ಹಾಗೂ ವೆಚ್ಚ ಹೆಚ್ಚಾಗುತ್ತದೆ.

**ಬಾಯಿಯ ದುರ್ವಾಸನೆಯ ಕಾರಣಗಳು :**

ಬಾಯಿಯ ದುರ್ವಾಸನೆಗೆ ಕಾರಣ ಹಲವಾರು ಇದ್ದರೂ, ಪ್ರಮುಖ ಕಾರಣ ಬ್ಯಾಕ್ಟೀರಿಯಾಗಳು. ಇವು ಆಹಾರ ಕಣಗಳೊಂದಿಗೆ ವರ್ತಿಸಿ ಉತ್ಪಾದಿಸುವ ರಾಸಾಯನಿಕ ವಸ್ತುಗಳಿಂದ ಬಾಯಿಯ ವಾಸನೆ ಉಂಟಾಗುವಲ್ಲಿ ಪಾತ್ರವಹಿಸುತ್ತವೆ. ಶೇ 90 ರಷ್ಟು ಜನರ ಬಾಯಿಯ



**ಇತ್ತೀಚಿನ ದಿನಗಳಲ್ಲಿ ಬಹುತೇಕ ಮಂದಿಯಲ್ಲಿ ವಸಡಿನ ತೊಂದರೆ ಸಾಮಾನ್ಯವಾಗಿದೆ. ಇದಕ್ಕೆ ಪ್ರಮುಖ ಕಾರಣ ಬಾಯಿಯ ಅಸ್ವಚ್ಛತೆ. ಹೃದ್ರೋಗದ ಕಾಯಿಲೆ, ಮಧುಮೇಹ, ಶ್ವಾಸಕೋಶದ ಸೋಂಕುಗಳು ಮತ್ತು ಬುದ್ಧಿಮಾಂದ್ಯತೆ ಸೇರಿದಂತೆ ಹಲವಾರು ಪರಿಸ್ಥಿತಿಗಳೊಂದಿಗೆ ಈ ವಸಡಿನ ತೊಂದರೆ ತೀವ್ರತೆಯನ್ನು ಹೆಚ್ಚಿಸುತ್ತದೆ**

ದುರ್ವಾಸನೆಗೆ ಸ್ಥಳೀಯ ಕಾರಣಗಳೇ ಹೆಚ್ಚು. ಇನ್ನು ಶೇ. 10 ರಷ್ಟು ಅಂತರ್ವ್ಯಾಪಿ ಕಾರಣಗಳಿರಬಹುದು.

**ಸ್ಥಳೀಯ ಕಾರಣಗಳು :**

● ಹಲ್ಲು ಮತ್ತು ನಾಲಿಗೆಯನ್ನು ಸ್ವಚ್ಛವಾಗಿಡದೇ ಇರುವುದು

● ವಸಡು ರೋಗ

● ದಂತಕುಳಿ, ಸೀಳು ಅಂಗುಳ, ಬಾಯಿ ಒಣಗುವಿಕೆ

● ಧೂಮಪಾನ ಮತ್ತು ಮದ್ಯಪಾನ

● ಬಾಯಿಯ ಅರ್ಬುದ ರೋಗ (ಕ್ಯಾನ್ಸರ್)

● ಕೆಲವು ಬಗೆಯ ಆಹಾರ ಪದಾರ್ಥಗಳು ಸೇವನೆ (ಉದಾ:- ಬೆಳ್ಳುಳ್ಳಿ ಈರುಳ್ಳಿ ಮೀನು........ ಇತ್ಯಾದಿ)

**ಅಂತರ್ವ್ಯಾಪಿ ಕಾರಣಗಳು :** ● ಗಂಟಲಿನ ತೊಂದರೆ ● ಜ್ವರ ● ಸಕ್ಕರೆ ಕಾಯಿಲೆ ● ಮೂತ್ರಕೋಶದ ತೊಂದರೆ ● ಶ್ವಾಸಕೋಶದ ತೊಂದರೆ ಹಾಗೂ ಇತ್ಯಾದಿಗಳು

**ವಿವಿಧ ರೀತಿಯ ವಸಡು ಚಿಕಿತ್ಸೆ ವಿಧಾನಗಳು:**

● ವಸಡು ಮತ್ತು ಹಲ್ಲುಗಳನ್ನು ಸ್ವಚ್ಛಗೊಳಿಸುವ ಚಿಕಿತ್ಸೆ ● ವಸಡಿನ ಶಸ್ತ್ರಚಿಕಿತ್ಸೆ ● ವಸಡಿನ ಅಂಗಾಂಶದ ಪುನರುತ್ಪತ್ತಿ ಚಿಕಿತ್ಸೆ ● ಪೆರಿಯೊಡಾಂಟಲ್ ಪ್ಲಾಸ್ಟಿಕ್ ಸರ್ಜರಿ

**ದಂತ ಆರೋಗ್ಯ ಕಾಪಾಡಿಕೊಳ್ಳಲು ಪಾಲಿಸಬೇಕಾದ ನಿಯಮಗಳು:**

● ನಿಯಮಿತವಾಗಿ ಸರಿಯಾದ ಕ್ರಮದಲ್ಲಿ ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ಮಲಗುವ ಮೊದಲು ಬ್ರಷ್ ಮಾಡಬೇಕು.

● ಊಟದ ಮಧ್ಯ ಸಿಹಿ ತಿಂಡಿಗಳನ್ನು ತಿನ್ನುವ ಅಭ್ಯಾಸವನ್ನು ಕಡಿಮೆ ಮಾಡಬೇಕು

● ಕ್ಯಾಲ್ಸಿಯಂ ಮತ್ತು ಖನಿಜಯುಕ್ತವಾದ ಹಸಿ ಸೊಪ್ಪು ಮತ್ತು ತರಕಾರಿಗಳನ್ನು ಸೇವಿಸಬೇಕು.

● ಎರಡು ಹಲ್ಲುಗಳ ನಡುವೆ ಆಹಾರ ಕಣಗಳು ಸಿಕ್ಕಿಹಾಕಿಕೊಂಡಾಗ ಫ್ಲಾಸ್ ಮತ್ತು ಚಿಕ್ಕ ಬ್ರಷ್‌ಗಳಿಂದ ಶುಚಿಗೊಳಿಸಬೇಕು.

● ಪ್ರತಿ ಆರು ತಿಂಗಳಿಗೊಮ್ಮೆ ದಂತ ವೈದ್ಯರನ್ನು ಕಂಡು ತಪಾಸಣೆಗೆ ಒಳಗಾಗಿ, ಸೂಕ್ತ ಚಿಕಿತ್ಸೆಯನ್ನು ಪಡೆದು, ಅವರ ಸಲಹೆ, ಸೂಚನೆಗಳನ್ನು ಪಾಲಿಸಬೇಕು.

ನಮ್ಮ ಜೀವನ ಶೈಲಿ ಮತ್ತು ಆಹಾರ ಪದ್ಧತಿಗಳು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಗಾದೆ ಮಾತಿನಂತೆ ಸರಿಯಾದ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ನಮ್ಮ ಬಾಯಿ, ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸಮತೋಲನದಲ್ಲಿಟ್ಟುಕೊಂಡು ಜೀವನದ ಸಂತಸದ ಕ್ಷಣಗಳನ್ನು ಅನುಭವಿಸಿ ಬದುಕಿನಲ್ಲಿ ಸಫಲತೆಯನ್ನು ಪಡೆಯೋಣ.

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ
40x60 ದಕ್ಷಿಣ (61 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409

**ಕೆಲಸಕ್ಕೆ ಬೇಕಾಗಿದ್ದಾರೆ**
ಫೀಲ್ಡ್ ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ. (ಬೈಕ್ ಇರುವವರಿಗೆ ಆದ್ಯತೆ) ಸಂಪರ್ಕಿಸಿ :
94817 74321

**ವಧು ಬೇಕಾಗಿದ್ದಾರೆ**
ಎರಡನೇ ಸಂಬಂಧ ವಧು ಬೇಕಾಗಿದ್ದಾರೆ. 44 ವರ್ಷ ರೈಸ್ ಅಂಡ್ ಕಿರಾಣಿ ಮರ್ಚಂಟ್ಸ್, ಯಾವುದೇ ಜಾತಿಯ ಅಭ್ಯಂತರವಿಲ್ಲ.
79754 06965, 89047 54519

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ $\frac{34+44}{2}$ x72 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
70196-74592

**ರಜತ ENT ಅಲರ್ಜಿ ಕ್ಲಿನಿಕ್**
Hearing Aids Available
ನಮ್ಮಲ್ಲಿ ನೂತನ ಮಾದರಿಯ ಹಾಗೂ ರಿಯಾಯಿತಿ ದರದಲ್ಲಿ ಕಿವಿಯ ಶ್ರವಣ ಸಾಧನವನ್ನು ವಿತರಿಸಲಾಗುವುದು. ಕಿವಿ ಕೇಳಿಸುವುದು ಕಡಿಮೆಯಾದವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ :
ರಜತ ಇಎನ್‌ಟಿ ಸ್ಪೆಷಾಲಿಟಿ ಸೆಂಟರ್
ವಿಘ್ನೇಶ್ 427, 8ನೇ ಕ್ರಾಸ್, 4ನೇ ಮೇನ್, ಪಿ.ಜೆ. ಬಡಾವಣೆ (ಬ್ಯಾಡಗಿ ಶೆಟ್ರು ಸ್ಕೂಲ್ ಎದುರು) ದಾವಣಗೆರೆ- 577002.
99002 26925

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6Pm ಬರುವಾಗ ದಯವಿಟ್ಟು ಫೋಟೊ ಬಯೋಡೇಟಾ ತನ್ನಿ

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ಮತ್ತು ಆಯಾ ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
98450-35710, 77607-39990

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಪಿಯುಸಿ ಆಗಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
99724 84418, 90365 59955

**ಬಾಡಿಗೆಗಿದೆ**
#1638/9, ತರಳಬಾಳು ಬಡಾವಣೆ 16ನೇ ಮೇನ್, 2ನೇ ತಿರುವು, ಡಬಲ್ ಬೆಡ್ ರೂಂ ಇರುವ ಮನೆ ಬಾಡಿಗೆಗಿದೆ.
(ಸಸ್ಯಹಾರಿಗಳಿಗೆ ಮಾತ್ರ)
9900094783, 9611705680

**ಸೈಟು ಮಾರಾಟಕ್ಕಿವೆ**
1. ಕರ್ನಾಟಕ ಗೃಹ ಮಂಡಳಿ
2. GMIT ಕಾಲೇಜ್ ಹತ್ತಿರ
3. ಡಾಲರ್ಸ್ ಕಾಲೋನಿ
4. ಎಸ್. ಎಸ್. ಲೇ ಔಟ್
ಸಂಪರ್ಕಿಸಿ : ಚಕ್ರವರ್ತಿ ರಿಯಲ್ ಎಸ್ಟೇಟ್ ಆಫೀಸ್
90199 16168

**ನೀರಾವರಿ ಜಮೀನು ಮಾರಾಟಕ್ಕಿದೆ**
ಚನ್ನಗಿರಿ ತಾಲ್ಲೂಕು, ನಲ್ಕುದುರೆ ಗ್ರಾಮದಲ್ಲಿ ನವಲೇಹಾಳ್‌ಗೆ ಹೋಗುವ ಮುಖ್ಯ ರಸ್ತೆಯ ಪಕ್ಕದಲ್ಲಿ 4 ಎಕರೆ 34 ಗುಂಟೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99805 15443

**ಕಾರು ಮಾರಾಟಕ್ಕಿದೆ**
ಒಳ್ಳೆಯ ಸುಸ್ಥಿತಿಯಲ್ಲಿರುವ 2005 ಮಾಡೆಲ್ ಇನ್ನೋವಾ ಕಾರು ಕಡಿಮೆ ಬೆಲೆಗೆ ಮಾರಾಟಕ್ಕೆ ಇದೆ.
9448746837

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿನಾಂಕ : 09.09.2024 ರಿಂದ 16.09.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ
ಅಕ್ಟೋಬರ್ 16 ರಿಂದ 26ರವರೆಗೆ
ಅಯೋಧ್ಯ-ನೇಪಾಳ ಪ್ರವಾಸ
ನಮ್ಮಲ್ಲಿ ಶಾಲಾ-ಕಾಲೇಜುಗಳಿಗೆ ಪ್ಯಾಕೇಜ್ ದರದಲ್ಲಿ ಪ್ರವಾಸ ಕೈಗೊಳ್ಳಲಾಗುತ್ತದೆ.
94485 33928, 90086 26473

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಮತ್ತು ಅಡುಗೆ ಮಾಡಲು ಲಿಂಗಾಯತ ಹೆಣ್ಣು-ಮಕ್ಕಳು ಬೇಕಾಗಿದ್ದಾರೆ.
99868 54252

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಬಿಲ್ಡಿಂಗ್ ಎಲೆಕ್ಟ್ರಿಕಲ್ ಪ್ಲಂಬಿಂಗ್ & ಸೆಕ್ಯೂರಿಟಿ ಸ್ವಲ್ಪ ಅನುಭವ ಇರುವ ಹುಡುಗ ಬೇಕಾಗಿದ್ದಾರೆ. ಸಂಬಳ 10.000/- ದಿಂದ 14,000/- ಊಟಕ್ಕೆ 2000 ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
97400 98047

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ (2400 sqft) 30x50, ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**WANTED**
MALE SALESMEN at the JOCKEY Exclusive Showroom
Contact us
98867 57688

**ಮನೆ ಬೇಕಾಗಿದೆ**
2BHK or 3BHK ಕುವೆಂಪು ನಗರ , M.C.C 'B' Block, ಆಂಜನೇಯ ಬಡಾವಣೆ ಸುತ್ತ ಮುತ್ತ.
90089 17697

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ವಿಲ್ಲಾ ಸೈಟುಗಳು ಮಾರಾಟಕ್ಕಿವೆ**
ವಿಲ್ಲಾ ಸೈಟುಗಳು, ಫಾರ್ಮ್‌ಹೌಸ್ ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ. 500/- sq.ft ಮಾತ್ರ, ಹರಪನಹಳ್ಳಿ ರಸ್ತೆ, ಮಾಗಾನಹಳ್ಳಿ ಹತ್ತಿರ, ದಾವಣಗೆರೆಯಿಂದ 5 ಕಿ.ಮೀ. ದೂರ.
9591974763, 7892568692

**ಬೇಕಾಗಿದ್ದಾರೆ**
ಪಾರ್ಟ್ ಟೈಂ ಕೆಲಸಕ್ಕೆ ಶಿಕ್ಷಕಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ : ಬಿ.ಎಸ್ಸಿ, ಬಿ.ಇಡಿ, ಕೆಲಸದ ಸಮಯ : ಬೆ. 10.30 ರಿಂದ 12.30 ಸಂಪರ್ಕಿಸಿ:
99005 69493

**ಬೇಕಾಗಿದ್ದಾರೆ**
ಬ್ಯಾಂಕಿಂಗ್ ಸೆಕ್ಟರ್‌ನಲ್ಲಿ ಕೆಲಸ ಮಾಡಲು ಟೆಲಿ ಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್ಸೆಂಟಿವ್ಸ್ ಕೊಡಲಾಗುತ್ತದೆ.
80885 58359

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ - ಈ ಕೆಳಗಿನಂತೆ
ಕಂಪ್ಯೂಟರ್ ಶಿಕ್ಷಕರು- 01
ಆಂಗ್ಲಭಾಷೆ ಶಿಕ್ಷಕರು -01
ವಾಚ್ ಮ್ಯಾನ್ (ವಸತಿ ಇರುತ್ತದೆ)
78926 71878

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ದಾವಣಗೆರೆ ಆಂಜನೇಯ ಬಡಾವಣೆ, 17ನೇ ಕ್ರಾಸ್, ಎಸ್‌ಆರ್‌ಪಿ ಸ್ಕೂಲ್ ಹತ್ತಿರದಲ್ಲಿರುವ ಹೆಚ್‌ಆರ್‌ಹೆಚ್ ಬಯೋಫರ್ಟಿಲೈಜರ್ಸ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ಇದೆ.
96321 19811, 7795260481

**ಹೋಟೆಲ್ ಸಾಮಾನು ಮಾರಾಟಕ್ಕಿವೆ**
ದೋಸೆ ಅಂಚು, ಚಿಮಣಿ ಕ್ಯಾಷ್‌ಟೇಬಲ್ ಅಕ್ವಾಗಾರ್ಡ್, ನೀರಿನ ಟ್ಯಾಂಕ್, ಸ್ಟವ್, ಪಾತ್ರೆ ಸಾಮಾನುಗಳು
99642 62725

**PUVM ACADEMY (R.)**
Require Spoken English Female Teacher
Salary 6000k
Part time job
time 6.00pm to 8.00pm
95350 51843

**ಮನೆ ಬಾಡಿಗೆಗೆ**
2BHK-1st / 2nd Floor, 3ನೇ ಮೇನ್, 16ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ. 1BHK-1st Floor, 1ನೇ ಮೇನ್, 4ನೇ ಕ್ರಾಸ್, ಪ್ರಶಾಂತ್ ನಗರ, ಹರಿಹರ.
91774 21966

**ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ**
850/- sq.ft ಮಾತ್ರ, ಅಂತಿಮ ಅನುಮೋದನೆಯಾದ ಲೇಔಟ್, ಮಾಗಾನಹಳ್ಳಿ ರಸ್ತೆ, ಅಮೃತ ನಗರ ಹತ್ತಿರ, ದಾವಣಗೆರೆಯಿಂದ 4 ಕಿ.ಮೀ. ದೂರ.
9591974736, 7892568692

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಉತ್ತರ ದಿಕ್ಕಿನ ಮನೆಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ, 18ನೇ ಕ್ರಾಸ್, ಪೂರ್ವ ಉತ್ತರ ದಿಕ್ಕಿನ ನಿವೇಶನದಲ್ಲಿ ಕಟ್ಟಿರೋ, ಉತ್ತರ ಬಾಗಿಲುಳ್ಳ 15 × 45 ಅಳತೆಯ 3 ಅಂತಸ್ತಿನ ಮನೆಗಳು ಮಾರಾಟಕ್ಕಿವೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಆಸಕ್ತರು ಮಾತ್ರ ಸಂಪರ್ಕಿಸಿ.
9353434545, 9845216749

**ಬೇಕಾಗಿದ್ದಾರೆ**
ಪ್ಯಾಕಿಂಗ್ ಕೆಲಸಕ್ಕೆ ಮಹಿಳೆಯರು & ಚಾಲಕ ಕಮ್ ಕಚೇರಿ ಸಹಾಯಕ ಸಂಪರ್ಕಿಸಿ: ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರಸ್ತೆ, ದಾವಣಗೆರೆ.
99863 66358

**ಬಾಡಿಗೆಗೆ ಇದೆ**
Office space for rent 5ನೇ ಮೇನ್, ಒಂದನೇ ಮಹಡಿ, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್, ಗಣೇಶ್ ದೇವಸ್ಥಾನ ಹಿಂಭಾಗ, ಪ್ರೊಫೆಷನಲ್ ಕೋರಿಯರ್ ಎದುರು ದಾವಣಗೆರೆ, ಆಫೀಸ್ ಉಪಯೋಗಕ್ಕೆ ಬಾಡಿಗೆಗೆ ಇದೆ.
98453 29030, 78929 53758

**ಬಾಡಿಗೆಗೆ ಇದೆ**
Doctors Clinic Space for Rent, 5ನೇ ಮೇನ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್, ಗಣೇಶ್ ದೇವಸ್ಥಾನ ಹಿಂಭಾಗ, ಪ್ರವೀಣ್ ಲ್ಯಾಬ್ ಪಕ್ಕ, ಪ್ರೊಫೆಷನಲ್ ಕೋರಿಯರ್ ಎದುರು ದಾವಣಗೆರೆ, ವೈದ್ಯರ ಕ್ಲಿನಿಕ್ ಉಪಯೋಗಕ್ಕೆ ಬಾಡಿಗೆಗೆ ಇದೆ.
98453 29030, 78929 53758

**WANTED**
SALES MARKETING EXECUTIVE
Experience in Lubricants Marketing
Dahanshree Marketing Davangere.
94830 67120

**ಬೇಕಾಗಿದ್ದಾರೆ**
ಶಿವಮೊಗ್ಗ ಜಿಲ್ಲೆ ಸಾಗರ ಟೌನ್ ನಲ್ಲಿ ಮಗುವನ್ನು ನೋಡಿಕೊಳ್ಳಲು ಸ್ತ್ರೀಯರು ಬೇಕಾಗಿದ್ದಾರೆ. ಸಂಪರ್ಕಿಸಿ :
99865 99923
91642 56425

**ಮನೆ ಬಾಡಿಗೆಗಿದೆ**
ಕುವೆಂಪು ನಗರದಲ್ಲಿ ಮೊದಲನೇ ಮಹಡಿಯ ಮನೆಯು ಎಲ್ಲಾ ಸೌಕರ್ಯಗಳನ್ನು ಹೊಂದಿದ್ದು, ಡಬಲ್ ಬೆಡ್ ರೂಮ್‌ಗಳನ್ನು ಹೊಂದಿದ್ದು, ಬಾಡಿಗೆಗೆ ದೊರೆಯುವುದಿದೆ. ಆಸಕ್ತರು ಸಂಪರ್ಕಿಸಿ :
99863 31471
(ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)

**ಬೇಕಾಗಿದ್ದಾರೆ**
ವಾಟರ್ ಪ್ಯೂರಿಫೈರ್ ಸರ್ವೀಸ್ ಮಾಡಲು ಬೆಂಗಳೂರಿಗೆ ಹುಡುಗರು ಬೇಕಾಗಿದ್ದಾರೆ. ಓದಲು, ಬರೆಯಲು ಬರಬೇಕು. ವಯಸ್ಸು 18 ರಿಂದ 30 ಸಂಬಳ 20,000+ಪೆಟ್ರೋಲ್, ವಸತಿ
98453 44346

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.8.2024ರ ಬುಧವಾರ
ದಿ.8.8.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED LADY TEACHERS**
B.Sc, B.Ed, PCM, CBZ - 4 Posts,
Note - We preference will be given to right & Experienced & Attractive Salary will be given to experiecned candidates.
95356 10817

**ಬೇಕಾಗಿದ್ದಾರೆ**
ಗ್ಯಾಸ್ ಏಜೆನ್ಸಿಯಲ್ಲಿ ಕೆಲಸ ಮಾಡಲು ಸ್ಟಾಫ್ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ದಾವಣಗೆರೆ.
78992 47347

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

SPBVS
**AKSHAR ENGLISH HIGHER PRIMARY SCHOOL T.C LAYOUT DAVANGERE**
**WANTED TEACHERS**
K.G. Classes-any Degree/D.Ed., 1st to 8th Std-Hindi & Computer Coding (B.A. B.Sc., B.Ed.,)
9731100216, 9844256380

**3 BHK HOUSE FOR RENT/LEASE**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ದಾಖಲೆಗಳ ಸಹಿತ ಆರೋಪಿಸಿ ಎಸ್ಸೆಸ್-ಎಸ್ಸೆಸ್ಸೆಂಗೆ ಜಾಧವ್ ತಿರುಗೇಟು

ದಾವಣಗೆರೆ, ಆ. 2-ನಾನು ನಿಮ್ಮ ಮೇಲೆ ಮಾಡುವ ಆರೋಪಗಳಿಗೆಲ್ಲಾ ದಾಖಲೆಗಳಿವೆ. ನೀವೂ ಸಹ ಬಾಯಿ ಚಪಲಕ್ಕೆ ನಮ್ಮ ಮೇಲೆ ಆರೋಪ ಮಾಡದೆ, ದಾಖಲೆಗಳನ್ನು ಇಟ್ಟುಕೊಂಡು ಆರೋಪ ಮಾಡಿ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ತಿರುಗೇಟು ನೀಡಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ.ಎಂ. ಸಿದ್ದೇಶ್ವರ ಹಾಗೂ ಜಿ. ಮಲ್ಲಿಕಾರ್ಜುನಪ್ಪ ಅವರನ್ನು ದಾವಣಗೆರೆಗೆ ಕರೆ ತಂದವರು ನಾವು ಎಂದು ಹೇಳಿದ್ದಾರೆ. ಹಾಗಾದರೆ 1996ರ ಲೋಕಸಭಾ ಚುನವಣೆಯಲ್ಲಿ ಹಿಂದುಳಿದ ವರ್ಗಗಳ ನಾಯಕ ದಿ.ಚನ್ನಯ್ಯ ಒಡೆಯರ್ ಅವರನ್ನುಸೋಲಿಸಿದ್ದು ಸ್ವತಃ ನೀವೇ ಎಂದು ಒಪ್ಪಿಕೊಂಡಂತಾಯಿತು ಎಂದರು.

ಶಿವಶಂಕರಪ್ಪ ಹಾಗೂ ಅವರ ಪುತ್ರ ಮಲ್ಲಿಕಾರ್ಜುನ್, ಮಾಜಿ ಸಂಸದ ಸಿದ್ದೇಶ್ವರ್ ಹಾಗೂ ಹಿಂದಿನ ದೂಡಾ ಅಧ್ಯಕ್ಷರುಗಳ ಮೇಲೆ ಮಾಡಿರುವ ಆರೋಪಗಳಿಗೆ ದಾಖಲೆಗಳನ್ನು ನೀಡಲಿ. ನಿಮ್ಮದೇ ಸರ್ಕಾರವಿದೆ ತನಿಖೆಯನ್ನೂ ನಡೆಸಲಿ ಎಂದರು. ನೀವು ನಡೆಸಿದ ಭ್ರಷ್ಟಾಚಾರಗಳ ಬಗ್ಗೆ ನೀವು ಹೇಳಿದ ಜಾಗಕ್ಕೆ ನಾನು ದಾಖಲೆ ತರುತ್ತೇನೆ. ನಮ್ಮ ಮೇಲಿನ ಆರೋಪಗಳಿಗೆ ನೀವು ತನ್ನಿ. ಮಾಧ್ಯಮಗಳ ಎದುರು ಬಹಿರಂಗ ಪಡಿಸೋಣ ಎಂದು ಜಾಧವ್ ಸವಾಲು ಹಾಕಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರುಗಳಾದ ಜಯಪ್ರಕಾಶ್ ಕೊಂಡಜ್ಜಿ, ಟಿಂಕರ್ ಮಂಜಣ್ಣ, ಕಿಶೋರ್ ಕುಮಾರ್, ಶಿವನಗೌಡ ಟಿ. ಪಾಟೀಲ್ ಇದ್ದರು.

## ನಾಳೆ, ನಾಡಿದ್ದು ನೃತ್ಯ, ಸಂಗೀತ ಪರೀಕ್ಷೆ

ದಾವಣಗೆರೆ: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯವು ಆಯೋಜಿಸಿದ್ದ ಸಂಗೀತ ಮತ್ತು ನೃತ್ಯ ಪ್ರಾಯೋಗಿಕ ಪರೀಕ್ಷೆಗಳು ಜ್ಯೂನಿಯರ್ ವಿಭಾಗಕ್ಕೆ ಆಗಸ್ಟ್ 3 ಮತ್ತು 4 ರಂದು ಹಾಗೂ ಸೀನಿಯರ್ ವಿಭಾಗಕ್ಕೆ ಆಗಸ್ಟ್ 10 ಮತ್ತು 11ರಂದು ಇಲ್ಲಿನ ಶರಣ ಮಾಗನೂರು ಬಸಪ್ಪ ಟ್ರಸ್ಟ್ ಶಾಲೆಯಲ್ಲಿ ನಡೆಯಲಿದೆ ಎಂದು ಮಹತಿ ಸಾಂಸ್ಕೃತಿಕ ಸಂಸ್ಥೆ ತಿಳಿಸಿದೆ.

# ಶ್ರಮದ ಬೆವರಿನ ಫಲ ಶಾಶ್ವತ - ಸುಖದಾಯಕ : ರಂಭಾಪುರಿ ಶ್ರೀ



ದಾವಣಗೆರೆ, ಆ. 2-ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಆದರ್ಶಗಳೇ ದಾರಿದೀಪ. ಪ್ರಗತಿಪರ ಧ್ಯೇಯೋದ್ದೇಶಗಳು ಮಾನವ ಜೀವನದ ಉನ್ನತಿಗೆ ಸಹಕಾರಿಯಾಗಿವೆ ಎಂದು ರಂಭಾಪುರಿ ಜಗದ್ಗುರು ಡಾ. ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ನಗರದ ಅಭಿನವ ರೇಣುಕಾ ಮಂದಿರದ ಸಭಾಂಗಣದಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಸಂಘಟಿಸಿದ ಜನಜಾಗೃತಿ ಧರ್ಮ ಸಮಾವೇಶದ 4ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ದೇಹವನ್ನು ದುಡಿಮೆಗೆ ಮತ್ತು ಮನಸ್ಸನ್ನು ಭಗವಂತನಿಗೆ ಅರ್ಪಿಸಿ ನಡೆದಾಗ ಬದುಕು ಉಜ್ವಲಗೊಳ್ಳುತ್ತದೆ. ಸಮಾಜದ ಓರೆ ಕೋರೆಗಳನ್ನು ತಿದ್ದಿ ತೀಡಿ ಮುನ್ನಡೆಸುವುದೇ ಮಹಾನುಭಾವರ ಕರ್ತವ್ಯವಾಗಿದೆ ಎಂದರು.

ಸಂಪತ್ತು ಬೆಳೆದಂತೆ ಸಂಸ್ಕೃತಿ ಬೆಳೆಯಬೇಕು. ಮನುಷ್ಯನ ಬುದ್ಧಿ ಶಕ್ತಿ ಬೆಳೆದಂತೆ ಭಾವನೆಗಳು ಬೆಳೆಯಲಾರದ್ದೇ ಇಂದಿನ ಎಲ್ಲಾ ಅವಾಂತರಗಳಿಗೆ ಕಾರಣವೆಂದರೆ ತಪ್ಪಾಗದು ಎಂದು ಹೇಳಿದರು.

ಮನುಷ್ಯ ಜೀವನದಲ್ಲಿ ಬದಲಾವಣೆ, ಬೆಳವಣಿಗೆ ಎರಡೂ ಅವಶ್ಯಕ. ಶ್ರಮದ ಬೆವರಿನ ಫಲ ಶಾಶ್ವತ ಮತ್ತು ಸುಖದಾಯಕ ಎಂದು ಜಗದ್ಗುರುಗಳು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ.ಎ.ಎಚ್.ಶಿವಯೋಗಿಸ್ವಾಮಿ ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ 'ಸಂಸ್ಕಾರ' ಬಹುದೊಡ್ಡ ಲೋಪವಾಗಿದೆ. ಸಂಸ್ಕಾರ ಉಳಿಸಿ, ಬೆಳೆಸುವಲ್ಲಿ ತಾಯಂದಿರ ಪಾತ್ರ ಅಪಾರವಾದುದು ಎಂದರು.

ಒತ್ತಾಯ, ಒತ್ತಡದ ಬದುಕಿನಲ್ಲಿ ಮಕ್ಕಳಿದ್ದಾರೆ. ನೈತಿಕ ಶಿಕ್ಷಣ ಬಿತ್ತುವ ಕೆಲಸ ಮಾಡಬೇಕಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ರಂಭಾಪುರಿ ಶ್ರೀಗಳು ತಾಯಿ ಹೃದಯ ಹೊಂದಿದವರು, ಸಹಾಯ ಕೇಳಿ ಅವರ ಬಳಿ ಹೋದವರಿಗೆ ಇಲ್ಲಾ ಎಂದು ವಾಪಸ್ ಕಳಿಸಿದ ಉದಾಹರಣೆಗಳೇ ಇಲ್ಲ. ಕೇವಲ ಧಾರ್ಮಿಕ ಕಾರ್ಯಗಳನ್ನಲ್ಲದೇ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಸಂಸ್ಕಾರ, ಸಂಸ್ಕೃತಿ ಉಳಿಸಿ, ಬೆಳೆಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎನ್. ಜಿ.ಪುಟ್ಟಸ್ವಾಮಿ ಮಾತನಾಡಿ, ಇಡೀ ರಾಜ್ಯದ ಎಲ್ಲಾ ವೀರಶೈವ ಮಠಾಧೀಶರನ್ನು ಒಂದೇ ಸೂರಿನಡಿ ಸೇರಿಸಿ, ವೀರಶೈವ ಮತ್ತು ಲಿಂಗಾಯತ ಎಂಬ ಗೊಂದಲ ನಿವಾರಣೆ ಜೊತೆಗೆ ಎಲ್ಲಾ ಒಳಪಂಗಡಗಳನ್ನು ಒಗ್ಗೂಡಿಸುವ ಅನಿವಾರ್ಯತೆ ಇದೆ. ಇದಕ್ಕೆ ರಂಭಾಪುರಿ ಜಗದ್ಗುರುಗಳು ಮನಸ್ಸು ಮಾಡಬೇಕೆಂದು ಮನವಿ ಮಾಡಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಮಾತನಾಡಿ, ಇಂದಿನ ಟಿ.ವಿಗಳಲ್ಲಿ ಬಿತ್ತರಗೊಳ್ಳುವ ಧಾರಾವಾಹಿಗಳು ಸಂಸಾರಗಳನ್ನು ಒಂದುಗೂಡಿಸುವ ಬದಲು ಬಾಂಧವ್ಯ ಕದಡುವ ಕೆಲಸ ಮಾಡುತ್ತಿವೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಸಂಸ್ಕಾರ, ಸಂಸ್ಕೃತಿ, ಸದ್ಗುಣಗಳನ್ನು ಬಿತ್ತುವ ಕೆಲಸ ಮಾಡಬೇಕೆಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಐಗೂರು ಚಂದ್ರಶೇಖರ್ ಮಾತನಾಡಿ, ಒಗ್ಗಟ್ಟಿನ ಕೊರತೆಯಿಂದಾಗಿ ವೀರಶೈವ ಲಿಂಗಾಯತರಿಗೆ ಸರ್ಕಾರಿ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ವಿಷಾದಿಸಿದರು.

ಇದೇ ಸಂದರ್ಭದಲ್ಲಿ ಕೈಗಾರಿಕೋದ್ಯಮಿ ಶಿವಗಂಗಾ ಶ್ರೀನಿವಾಸ್ ಅವರಿಗೆ 'ಶ್ರಮ ಸೇವಾ ಸಂಜೀವಿನಿ' ಎಂಬ ಬಿರುದನ್ನಿತ್ತು ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ತಾವರಕೆರೆ ಶಿಲಾಮಠದ ಡಾ.ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಮನುಷ್ಯ ಜೀವನದಲ್ಲಿ ಧರ್ಮ, ದೇವರು ಮತ್ತು ಗುರುವನ್ನು ಮರೆಯಬಾರದೆಂದರು. ಮಳಲಿ ಡಾ. ನಾಗಭೂಷಣ ಶಿವಾಚಾರ್ಯರು, ಚನ್ನಗಿರಿ ಕೇದಾರ ಶಿವಶಾಂತವೀರ ಶಿವಾಚಾರ್ಯರು, ಹನುಮಾಪುರದ ಸೋಮಶೇಖರ ಶಿವಾಚಾರ್ಯರು, ನಂದಿತಾವರೆ ಸಿದ್ಧಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು.

ವೈದ್ಯೆ ಡಾ.ಎಸ್.ಎಸ್.ನೇತ್ರಾವತಿ, ಜಾನಪದ ಕಲಾವಿದ ಮಹೇಶ್ವರಗೌಡ ಲಿಂಗದಹಳ್ಳಿ, ಎಸ್.ಪರಮೇಶ್ವರಪ್ಪ ಬಣಕಾರ, ಜಿ.ಹೆಚ್. ನಾಗರಾಜಪ್ಪ, ವಿರೂಪಾಕ್ಷಪ್ಪ ಅಣಜಿ, ಕೆ.ವಿ. ಗುರುರಾಜ್, ವೀರಮ್ಮ ಆವರಗೊಳ್ಳ, ಪುಷ್ಪ ಆವರಗೊಳ್ಳ, ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರು ರಕ್ಷೆ ಸ್ವೀಕರಿಸಿದರು.

ಟಿ.ಜಿ.ಸುರೇಶ ಸ್ವಾಗತಿಸಿದರು. ಪಂಚಾಕ್ಷರಯ್ಯ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಸಲ್ಲಿಸಿದರು. ಹರಿಹರದ ಕಾಂತರಾಜ-ವೀರೇಶ ಬಡಿಗೇರ ಸಂಗೀತ ಸೇವೆ ಸಲ್ಲಿಸಿದರು. ಪ್ರೊ.ಮಲ್ಲಯ್ಯ ನಿರೂಪಿಸಿದರು.

ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಮತ್ತು ಶ್ರೀ ಜಗದ್ಗುರು ರೇಣುಕ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದೇವರಮನೆ ಶಿವರಾಜ್ ಅವರು ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

# ರಜತ ಮಹೋತ್ಸವದಲ್ಲಿ ಶಿವ ಸೊಸೈಟಿ - ತರಳಬಾಳು ಶ್ರೀ ಸಂತಸ



ಹೊನ್ನಾಳಿ, ಆ. 2- ಸೊಸೈಟಿ ನಿರ್ದೇಶಕರಿಗೆ ಕನಿಷ್ಠ ಠೇವಣಿಯ ನಿರ್ಬಂಧ, ಸೂಚಿಸುವ ಸಾಲಗಾರರು ಸಾಲ ಮರುಪಾವತಿಸದಿದ್ದರೆ ಠೇವಣಿ ಹಣ ಪಾವತಿಸಿಕೊಳ್ಳುವ ಕಠಿಣ ನಿರ್ಧಾರದಿಂದ ಸೊಸೈಟಿ ಲಾಭದಾಯಕವಾಗುವ ಜೊತೆಗೆ ಬೆಳ್ಳಿ ಹಬ್ಬದ ಆಚರಣೆಗೆ ಮುಂದಾಗಿರುವುದು ಸಂತಸದ ವಿಚಾರ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಹೊನ್ನಾಳಿ ತಾಲೂಕಿನ ಗೊಲ್ಲರಹಳ್ಳಿ ತರಳಬಾಳು ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಶಿವ ಕೋ- ಆಪರೇಟಿವ್ ಸೊಸೈಟಿಯ 'ಬೆಳ್ಳಿ ಹಬ್ಬ ಆಚರಣೆ ಮಹೋತ್ಸವ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಈ ಸೊಸೈಟಿಯು ಉತ್ತರೋತ್ತರವಾಗಿ ಬೆಳೆದು ಅಭಿವೃದ್ಧಿ ಹೊಂದುವಂತಾಗಲೆಂದು ಶುಭ ಹಾರೈಸಿದ ಶ್ರೀಗಳು, ಕಳೆದ 25 ವರ್ಷಗಳಿಂದ ಸತತವಾಗಿ ಸೊಸೈಟಿ ಮುನ್ನಡೆಸಿಕೊಂಡು ಬಂದುದಲ್ಲದೇ ನಾಲ್ಕು ಶಾಖೆಗಳನ್ನು ತೆರೆಯಲು ಸಹಕರಿಸಿದ ನಿರ್ದೇಶಕರು, ಸದಸ್ಯರನ್ನು ಅಭಿನಂದಿಸಿದರು.

ಗೊಲ್ಲರಹಳ್ಳಿ ಗ್ರಾಮದಲ್ಲಿ ಭವ್ಯವಾದ ತರಳಬಾಳು ಸಮುದಾಯ ಭವನ ನಿರ್ಮಾಣದಿಂದ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಜನತೆ ಅನುಕೂಲವಾಗಲಿದೆ ಎಂದು ಹೇಳಿದರು.

ಶಾಸಕ ಶಾಂತನಗೌಡ ಮಾತನಾಡಿ, 25 ವರ್ಷಗಳ ಹಿಂದೆ ಶಿವ ಸೊಸೈಟಿ ಆರಂಭಿಸಿ, ಎರಡು ವರ್ಷದಲ್ಲಿ ಕೇಂದ್ರ ಕಚೇರಿ ಆರಂಭಿಸಿ ಉದ್ಘಾಟನೆಗೊಂಡಿದೆ. ಈ ಸೊಸೈಟಿಯು 4 ಶಾಖೆಗಳನ್ನು, ಎರಡು ಸ್ವಂತ ಕಟ್ಟಡ ಹೊಂದಿದ್ದರೆ, ಇನ್ನೆರಡು ಶಾಖೆಗಳ ಕಟ್ಟಡ ನಿರ್ಮಾಣವಾಗಬೇಕಿದೆ ಎಂದರು.

ಸಂಸ್ಥಾಪಕ ಅಧ್ಯಕ್ಷ ಬೆನಕನಹಳ್ಳಿ ಎ.ಜಿ. ಚಂದ್ರಶೇಖರಪ್ಪ ಸೇರಿದಂತೆ ಅನೇಕ ಸಮಾಜ ಬಾಂಧವರಿಂದ ಸೊಸೈಟಿ ಬೆಳೆದು ಬಂದದ್ದನ್ನು ಸ್ಮರಿಸಿದ ಶಾಸಕರು ಇದೊಂದು ಮಾದರಿಯ ಸೊಸೈಟಿಯಾಗಿದೆ ಎಂದರು.

ಗುರುಗಳ ಹಾಗೂ ಸಮಾಜದ ಬಹುಮುಖ್ಯ ಕನಸು, ಅಭಿಲಾಷೆ ಎಂದರೆ ತರಳಬಾಳು ಸಮುದಾಯ ಭವನ ಪೂರ್ಣಗೊಳ್ಳುವುದಾಗಿದ್ದು, ಇದು ಪೂರ್ಣಗೊಳ್ಳಲು ಹಣದ ಅಭಾವವಿರುವ ಕಾರಣ 1 ಕೋಟಿ ರೂ.ಗಳನ್ನು ಶ್ರೀಗಳು ಸಮಾಜಕ್ಕೆ ಆಶೀರ್ವಾದ ರೂಪದಲ್ಲಿ ನೀಡುವಂತೆ ಸಮಾಜದ ಪರವಾಗಿ ಮನವಿ ಮಾಡುವೆ ಏಕೆಂದರೆ ಎಲ್ಲಾ 'ಬಸ್ ಫುಲ್ - ಕಲೆಕ್ಷನ್ ನಿಲ್' ಎನ್ನುವಂತಾಗಿದೆ ಎಂದು ಹೇಳಿದರು.

ತಾಲ್ಲೂಕು ಸಾಧು ಸಮಾಜದ ಅಧ್ಯಕ್ಷ ಹುಣಸಘಟ್ಟ ಗದುಗೇಶ ಮಾತನಾಡಿ, ತರಳಬಾಳು ಸಮುದಾಯ ಭವನ ಪೂರ್ಣಗೊಳ್ಳಲು 1 ಕೋಟಿ 50 ಲಕ್ಷ ರೂ. ಅವಶ್ಯಕತೆ ಇದೆ. ಗುರುಗಳ ಆಶೀರ್ವಾದ ಭಕ್ತರ ಸಹಕಾರದಿಂದ ಪೂರ್ಣಗೊಳ್ಳಬೇಕಿದೆ ಎಂದರು.

ಕೋಟೆ ಮಲ್ಲೂರು ಬೆನಕಪ್ಪಗೌಡರು ಮಾತನಾಡಿ, ತಾಲೂಕಿನಲ್ಲಿ ಹೆಚ್.ಎಸ್. ರುದ್ರಪ್ಪನವರಂತೆ ಬೆನಕನಹಳ್ಳಿ ಚಂದ್ರಪ್ಪ ಗೌಡ್ರು ಹಾಗೂ ಮಾಜಿ ಶಾಸಕ ಬಸನಗೌಡರ ಬಗ್ಗೆಯೂ ಪುಸ್ತಕ ರೂಪದಲ್ಲಿ ಪರಿಚಯಿಸುವ ಕಾರ್ಯವಾದರೆ ಒಳಿತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾಜಿ ಶಾಸಕ ರೇಣುಕಾಚಾರ್ಯ, ಸಾಧು ವೀರಶೈವ ಸಮಾಜದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚೀಲೂರು ವಿಶ್ವನಾಥ್ ಮಾತನಾಡಿದರು.

ಸೊಸೈಟಿ ಅಧ್ಯಕ್ಷ ಆರುಂಡಿ ಸತೀಶ್ ಅಧ್ಯಕ್ಷತೆ ವಹಿಸಿದ್ದರು. ನ್ಯಾಮತಿ ಶಿವಪ್ಪ, ಡಿ.ಎಸ್. ಪ್ರದೀಪ್ ಗೌಡ್ರು, ಕೆಂಗನಹಳ್ಳಿ ಷಣ್ಮುಖಪ್ಪ, ಗುರುಮೂರ್ತಿ, ತೀರ್ಥಲಿಂಗಪ್ಪ, ಜ್ಯೋತಿ ಅಕ್ಕ, ಸೊಸೈಟಿ ಉಪಾಧ್ಯಕ್ಷೆ ಯಶೋಧಮ್ಮ, ನಿರ್ದೇಶಕರಾದ ಶೈಲೇಶ್, ಚಂದ್ರಪ್ಪ, ಕೆಂಚಪ್ಪ, ಚನ್ನವೀರಪ್ಪ, ಬಸವರಾಜ್, ಶಂಕರಗೌಡ, ಕರಿಬಸಪ್ಪ, ಶಿವಕುಮಾರ್, ಚೇತನ್ ಕುಮಾರ್, ಮಂಜುಳಾ, ಕೃಷ್ಣ ನಾಯಕ್, ಕಾರ್ಯದರ್ಶಿ ರುದ್ರೇಶ್ ಶಿವಮೊಗ್ಗ, ಶಿಕಾರಿಪುರ ಅರತಾಳ್ ಬ್ಯಾಂಕಿನ ಅಧ್ಯಕ್ಷರು ಸೇರಿದಂತೆ ಹೊನ್ನಾಳಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ



ದಾವಣಗೆರೆ, ಆ. 2 - ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು 4ರ ಭಾನುವಾರ ಭೀಮನ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಅಂದು ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಮಂಗಳ ಮತ್ತು ಅಜಯ್‌ಕುಮಾರ್ ಮತ್ತು ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಶ್ರೀ ದಾನಮ್ಮ ದೇವಸ್ಥಾನದಲ್ಲಿ ನಾಳೆ ನಾಗರ ಅಮಾವಾಸ್ಯೆ



ದಾವಣಗೆರೆ, ಆ. 2- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನ ದಲ್ಲಿ ನಾಗರ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 4ರಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪ ಡಿಸಲಾಗಿದೆ. ಗೌಡ್ರ ಜಯದೇವಪ್ಪ ಮತ್ತು ಮಕ್ಕಳು, ಕೆ.ಎಂ. ರವಿಶಂಕರ್ ಮತ್ತು ಮಕ್ಕಳು, ರವಿ ಬೆಣ್ಣೆ ದೋಸೆ ಹೋಟೆಲ್, ಕರಿಬಸವರಾಜು ಮುಂಡ ರಗಿ ಮತ್ತು ಮಕ್ಕಳು, ದಾವಣಗೆರೆ. ಶ್ರೀಮತಿ ಶೋಭಾ ಹಾಲೇಶಪ್ಪ, ಮಕ್ಕಳು, ಸೊಸೆಯಂದಿರು, ಹೆಮ್ಮನಬೇತೂರು ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಯೋಗಪಟು ಎನ್.ಪರಶುರಾಮ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಆ.2- ನಗರದ ಯೋಗ ಕೇಂದ್ರವಾದ ಎಸ್ಎಸ್ಎಸ್ ಯೋಗ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಯೋಗಾಚಾರ್ಯ ಎನ್. ಪರಶುರಾಮ್ ಅವರಿಗೆ 'ಯೋಗ ಶಿರೋಮಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಇತ್ತೀಚಿಗೆ ಬೆಂಗಳೂರಿನ ಕೋರಮಂಗಲದ ಒಳ ಕ್ರೀಡಾಂಗಣದಲ್ಲಿ ನಡೆದ ಎಸ್‌ಜಿಎಸ್ ಇಂಟರ್ ನ್ಯಾಷನಲ್ ಯೋಗ ಫೌಂಡೇಷನ್ ಕಾಲೇಜ್ ರಿಸರ್ಚ್ ಅಂಡ್ ಸೆಂಟರ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಸಹಕಾರದಲ್ಲಿ ನಡೆದ ಅಂತರರಾಜ್ಯ ಯೋಗಾಸನ ಚಾಂಪಿಯನ್ ಶಿಪ್ ಕಾರ್ಯಕ್ರಮದಲ್ಲಿ ಪರಶುರಾಮ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಹವಾಮಾನ ಮುನ್ಸೂಚನೆಗೆ ಖಾಸಗಿಗೆ ಸಲಹೆ

ನವದೆಹಲಿ, ಆ. 2 - ನಿಖರ ಹವಾಮಾನ ಮುನ್ನೆಚ್ಚರಿಕೆ ಪಡೆಯಲು ಖಾಸಗಿ ಸಹಭಾಗಿತ್ವ ಹೊಂದುವಂತೆ ರಾಜ್ಯಸಭಾ ಸದಸ್ಯೆ ಕನಿಮೋಳಿ ಎನ್. ವಿ.ಎನ್. ಸೋಮು ಸಲಹೆ ನೀಡಿದ್ದಾರೆ.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತ ನಾಡಿದ ಅವರು, ಹವಾಮಾನ ಇಲಾಖೆಗೆ ಹಲವು ಶತಕೋಟಿ ಡಾಲರ್‌ಗಳ ಹೂಡಿಕೆ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ಸಹಭಾಗಿತ್ವ ಸೂಕ್ತವಾಗಿದೆ ಎಂದು ಹೇಳಿದರು. ಖಾಸಗಿ ಸಂಸ್ಥೆಗಳು ಹವಾಮಾನ ಮಾಹಿತಿಗೆ ಸಂಬಂಧಿಸಿದ ಹಕ್ಕುಸ್ವಾಮ್ಯವಿರುವ ಸೆನ್ಸರ್‌ಗಳನ್ನು ಹೊಂದಿವೆ. ಸುಧಾರಿತ ಮಾದರಿಗಳನ್ನು ರೂಪಿಸಿವೆ ಹಾಗೂ ಸೂಪರ್ ಕಂಪ್ಯೂಟಿಂಗ್ ಅಳವಡಿಸಿ ಜಾಗತಿಕ ಮಾಹಿತಿ ವಿಶ್ಲೇಷಣೆ ಮಾಡುತ್ತಿವೆ ಎಂದು ಸಂಸದೆ ಸೋಮು ಹೇಳಿದರು.

ಖಾಸಗಿ ಸಹಭಾಗಿತ್ವದ ಮೂಲಕ ಹವಾಮಾನ ಮುನ್ನೆಚ್ಚರಿಕೆ ನಿಖರವಾಗಿ ಪಡೆಯುವ ಜೊತೆಗೆ, ತೀವ್ರ ವಿಕೋಪಗಳಿಂದ ಆಗುವ ಅನಾಹುತ ನಿಯಂತ್ರಿಸಬಹುದು ಹೇಳಿದರು.

# ಹರಪನಹಳ್ಳಿ : ಹಿಂದಿ ಶಿಕ್ಷಕ ಸಿದ್ದೇಶ್ ವರ್ಗಾವಣೆ ಶಾಲಾ ಮಕ್ಕಳು ಪ್ರತಿಭಟನೆ




ಹರಪನಹಳ್ಳಿ, ಆ. 2 - ಸಿದ್ದೇಶ್ವರ ವಸತಿ ಪ್ರೌಢ ಶಾಲೆ ಹಿಂದಿ ಭಾಷಾ ಶಿಕ್ಷಕ ಸಿದ್ದೇಶ್ ವರ್ಗಾವಣೆ ಆದೇಶವನ್ನು ರದ್ದುಗೊಳಿಸಲು ಆಗ್ರಹಿಸಿ, ಶಾಲಾ ಮಕ್ಕಳು ಹಾಗೂ ಪೋಷಕರು ದಿಢೀರ್ ಪ್ರತಿಭಟನೆ ನಡೆಸಿದರು.

ಹಿಂದಿ ಭಾಷಾ ಶಿಕ್ಷಕ ಸಿದ್ದೇಶ್ ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮಾದರಿಯ ಶಿಕ್ಷಕ ಎನಿಸಿಕೊಂಡಿದ್ದಾರೆ. ಅವರನ್ನು, ಶಾಲಾ ಆಡಳಿತ ಮಂಡಳಿ ಏಕಾಏಕಿ ವರ್ಗಾವಣೆಗೊಳಿಸಿ ಆದೇಶ ಹೊರಡಿಸಿದ್ದಾರೆ. ವರ್ಗಾವಣೆಯಿಂದ ಮಕ್ಕಳ ಶೈಕ್ಷಣಿಕ ಮಟ್ಟ ಕುಸಿಯಬಹುದು. ಆದ್ದರಿಂದ ಕೂಡಲೇ ವರ್ಗಾವಣೆ ಆದೇಶವನ್ನು ರದ್ದುಗೊಳಿಸಿ ಶಿಕ್ಷಕ ಸಿದ್ದೇಶ್ ಅವರನ್ನು ಮುಂದುವರೆಸುವಂತೆ ವಿದ್ಯಾರ್ಥಿಗಳು, ಪೋಷಕರು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡ ಚಿನ್ನಪ್ಪ, ಜಿ. ನಾಗರಾಜ್, ಸಿದ್ಧವೀರಪ್ಪ, ಅಶೋಕ್, ಹಾಲೇಶ್, ನಾಗರಾಜ್, ಭೀಮಪ್ಪ, ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಹಾಜರಿದ್ದರು.

# ಜಿಲ್ಲಾ ವರದಿಗಾರರ ಕೂಟದ ಗೌರವಾಧ್ಯಕ್ಷರಾಗಿ ಬಿ.ಎನ್. ಮಲ್ಲೇಶ್






ದಾವಣಗೆರೆ, ಆ. 2 - ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಗೌರವಾಧ್ಯಕ್ಷರಾಗಿ ಬಿ. ಎನ್. ಮಲ್ಲೇಶ್ (ನಗರವಾಣಿ), ಅಧ್ಯಕ್ಷರಾಗಿ ನಾಗರಾಜ್ ಎಸ್. ಬಡದಾಳ್ (ಕನ್ನಡ ಪ್ರಭ), ಪ್ರಧಾನ ಕಾರ್ಯದರ್ಶಿಯಾಗಿ ಎಂ.ವೈ. ಸತೀಶ (ವಾರ್ತಾ ವಿಹಾರ) ಖಜಾಂಚಿಯಾಗಿ ಪವನ್ ಐರಣಿ (ಹೊಸ ದಿಗಂತ) ಆಯ್ಕೆಗೊಂಡಿದ್ದಾರೆ.

ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಪಿ.ಎಸ್. ಲೋಕೇಶ್ (ನ್ಯೂಸ್ ಫಸ್ಟ್), ಹಿರಿಯ ಉಪಾಧ್ಯಕ್ಷರಾಗಿ ಕೆ. ಚಂದ್ರಣ್ಣ ಪೇಪರ್ (ಕರ್ನಾಟಕ ಎಕ್ಸ್‌ಪ್ರೆಸ್) ಎ.ಎಲ್. ತಾರಾನಾಥ್ (ದೂರದರ್ಶನ) ಮಂಜುನಾಥ ಗೌರಕ್ಕಳವರ್ (ಸಂಯುಕ್ತ ಕರ್ನಾಟಕ) ಎಂ.ಬಿ. ನವೀನ್ (ವಿಜಯವಾಣಿ), ಸಿದ್ದಯ್ಯ ಹಿರೇಮಠ (ಪ್ರಜಾವಾಣಿ) ಸದಾನಂದ ಹೆಗ್ಡೆ (ವಿಜಯ ಕರ್ನಾಟಕ), ರಾಮಪ್ರಸಾದ (ರಾಜ್ ನ್ಯೂಸ್), ಕಚೇರಿ ಕಾರ್ಯದರ್ಶಿಯಾಗಿ ಎಚ್. ಎಂ.ಪಿ.ಕುಮಾರ್ ( ಇಂಡಿಯಾ ಟುಡೇ, ಆಜ್ ತಕ್) ಇವರು ಆಯ್ಕೆಯಾಗಿದ್ದಾರೆ.

ಸಲಹಾ ಸಮಿತಿಯ ಸದಸ್ಯರಾಗಿ ಎಂ.ಎಸ್. ವಿಕಾಸ್ (ಜನತಾವಾಣಿ), ಕೆ. ಏಕಾಂತಪ್ಪ (ಮಲ್ನಾಡ ವಾಣಿ), ಜಿ.ಎಂ.ಆರ್. ಆರಾಧ್ಯ (ಜನಮಿಡಿತ) ವೀರಪ್ಪ ಎಂ. ಬಾವಿ (ಇಂದಿನ ಸುದ್ದಿ), ಮಲ್ಲಿಕಾರ್ಜುನ ಕಬ್ಬೂರು (ಕನ್ನಡ ಭಾರತಿ) ಕಾಡಜ್ಜಿ ಮಂಜುನಾಥ (ಸಂಯುಕ್ತ ಕರ್ನಾಟಕ) ಡಾ. ವರದರಾಜ (ಸುವರ್ಣ ನ್ಯೂಸ್), ಎಚ್.ಕೆ. ನಟರಾಜ (ಉದಯವಾಣಿ)

ಸಂಘಟನಾ ಕಾರ್ಯದರ್ಶಿಗಳಾಗಿ ಕೆ. ಉಮೇಶ ಕಾಡಪ್ಪ (ಜನಸ್ಪಂದನ), ಮಲ್ಲಿಕಾರ್ಜುನ ಕೈದಾಳೆ (ಡೆಮಾಕ್ರಟಿಕ್ ನ್ಯೂಸ್) ಗಣೇಶ ಕಮಲಾಪುರ (ವಿಜಯವಾಣಿ) ಆರ್. ರವಿಬಾಬು (ಉದಯವಾಣಿ) ಕಾರ್ಯದರ್ಶಿಗಳಾಗಿ ಡಿ.ಎಂ. ಮಹೇಶ (ವಿಜಯವಾಣಿ) ಕೆ. ಎಸ್. ಚನ್ನಬಸಪ್ಪ ಶಂಭು (ಆಕಾಶವಾಣಿ) ತೇಜಸ್ವಿನಿ ಪ್ರಕಾಶ (ಸಂಜೆವಾಣಿ) ಸಿಕಂದರ್ (ಜನತಾವಾಣಿ).

ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಡಾ.ಕೆ. ಜೈಮುನಿ (ಸುಭಾಷಿತ) ಶಿವರಾಜ ಈಳಿಗೇರ (ಆರ್. ಕನ್ನಡ) ಹೆಚ್. ಅನಿತಾ (ಪ್ರಜಾವಾಣಿ) ಕಾವ್ಯ ಬಿ.ಕೆ. (ಸಂಯುಕ್ತ ಕರ್ನಾಟಕ) ಕ್ರೀಡಾ ಕಾರ್ಯದರ್ಶಿಗಳಾಗಿ ಮಹೇಶ ಕಾಶೀಪುರ (ನಗರವಾಣಿ) ಬಿ.ಜಿ. ಮಹದೇವ (ನ್ಯೂಸ್ ಫಸ್ಟ್) ಎಚ್.ಟಿ. ರಮೇಶ (ಪಬ್ಲಿಕ್ ಟಿವಿ) ಸುರೇಶ ಕಕ್ಕರಗೊಳ್ಳ (ನಗರವಾಣಿ) ಹಾಗೂ ನಿರ್ದೇಶಕರುಗಳಾಗಿ ಓ.ಎನ್. ಸಿದ್ದಯ್ಯ ಒಡೆಯರ್ (ಜನತಾವಾಣಿ), ರವಿ ಭುವನೇಶ್ವರಿ (ಭುವನೇಶ್ವರಿ) ಎನ್. ನಿಂಗರಾಜ (ನಗರ ಮಿಡಿತ) ಡಾ.ಬಿ.ವಾಸುದೇವ ಹರಿಹರ (ವಿಸ್ಮಯವಾಣಿ) ವಿವೇಕ್ ಬದ್ದಿ (ವಿಜಯ ಕರ್ನಾಟಕ) ಮೊಹಮ್ಮದ್ ರಫೀಕ್ (ಜನತಾವಾಣಿ) ಆರ್.ಎಸ್. ತಿಪ್ಪೇಸ್ವಾಮಿ (ಜನಮಿಡಿತ) ಸುರೇಶ ಕುಣಿಬೆಳಕೆರೆ (ಹರಿಹರ ನಗರವಾಣಿ), ಎಸ್.ಕಿರಣಕುಮಾರ (ಸುವರ್ಣ ನ್ಯೂಸ್) ವಿಜಯಕುಮಾರ ಜೈನ್ (ನಗರ ಮಿಡಿತ) ಕರಿಬಸವರಾಜ (ಜೆಕೆ ಟಿವಿ) ಇವರುಗಳನ್ನು ಆಯ್ಕೆಯಾಗಿದ್ದಾರೆ ಎಂದು ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್ ತಿಳಿಸಿದ್ದಾರೆ.

# ಮಾದಿಗ ಸಮಾಜಕ್ಕೆ ಒಳಮೀಸಲಾತಿ ಜಾರಿ : ವಿಜಯೋತ್ಸವ

## ಮಾದಿಗ ಸಮಾಜದ ನಡೆಸಿದ ಹೋರಾಟಕ್ಕೆ ಸಿಕ್ಕ ಪ್ರತಿಫಲ : ಆಲೂರು ನಿಂಗರಾಜ್



ದಾವಣಗೆರೆ, ಆ. 2 - ಒಳ ಮೀಸಲಾತಿ ಜಾರಿ ಮಾಡುವಂತೆ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಮಾದಿಗ ಸಮಾಜದಿಂದ ಶುಕ್ರವಾರ ನಗರದ ಅಂಬೇಡ್ಕರ್ ವೃತ್ತದಲ್ಲಿ ಸಿಹಿ ಹಂಚಿ, ಪಟಾಕಿ ಸಿಡಿಸುವ ಮೂಲಕ ವಿಜಯೋತ್ಸವ ಆಚರಿಸಿ, ಒಳಮೀಸಲಾತಿಗಾಗಿ ಹೋರಾಟ ನಡೆಸಿದವರಿಗೆ ಸಮಾಜದವರು ಕೃತಜ್ಞತೆ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಮಾದಿಗ ಸಮಾಜದ ಮುಖಂಡ ಆಲೂರು ನಿಂಗರಾಜ್, ಕರ್ನಾಟಕದಲ್ಲಿ ಮಾದಿಗ ಸಮಾಜಕ್ಕೆ ಉದ್ಯೋಗ, ಸಾಮಾಜಿಕ, ಶೈಕ್ಷಣಿಕ ಹಾಗು ಇನ್ನಿತರೆ ಮೀಸ ಲಾತಿ ಸವಲತ್ತನ್ನು ಜಾತಿ ಜನ ಸಂಖ್ಯೆಗೆ ಅನುಗು ಣವಾಗಿ (ಒಳಮೀಸಲಾತಿ) ಜಾರಿ ಮಾಡುವಂತೆ ಈ ಹಿಂದೆ ಕರ್ನಾಟಕದ ಅಂಬೇಡ್ಕರ್ ಎಂದೇ ಪ್ರಾಖ್ಯಾತರಾಗಿದ್ದ ಪ್ರೊ. ಬಿ. ಕೃಷ್ಣಪ್ಪನವರು 1996ರಲ್ಲಿ ಪ್ರತ್ಯೇಕ ಮೀಸಲಾತಿಗಾಗಿ ಹೋರಾ ಟದ ಹಣತೆ ಹಚ್ಚಿದರು ಎಂದು ನೆನಪಿಸಿಕೊಂಡರು.

ನಂತರದ ದಿನಗಳಲ್ಲಿ ಅನೇಕ ಹೋರಾಟಗಳನ್ನು ನಡೆಸಿದರೂ ಕಾಂಗ್ರೆಸ್ ಸರ್ಕಾರ ಏನೂ ಮಾಡಲಿಲ್ಲ ಎಂದು ಆಲೂರು ನಿಂಗರಾಜ್ ಆಕ್ರೋಶ ವ್ಯಕ್ತಪಡಿಸಿದರು. ಸಂಘ ಪರಿವಾರದ ಮಾರ್ಗದರ್ಶನದಂತೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ್ ಬೊಮ್ಮಾಯಿ ಅವರು ಅಧಿಕಾರ ಅವಧಿಯಲ್ಲಿ ಕೇವಲ ಶೇ. 15 ಇದ್ದ ಮೀಸಲಾತಿಯನ್ನು ಶೇ. 17ಕ್ಕೆ ಹೆಚ್ಚಿಸಿದ್ದಲ್ಲದೇ ಜಾತಿ ಜನಸಂಖ್ಯೆಗೆ ಅನುಗುಣವಾಗಿ ಜಾತಿಯಲ್ಲಿ ಬರುವ 101 ಜಾತಿಗಳಿಗೂ ಸಮನಾಗಿ ಅಂದರೆ ಮಾದಿಗ ಜಾತಿಗೆ ಶೇ. 6 ವಲಯ ಜಾತಿಗೆ ಶೇ. 5.5, ಭೋವಿ ಲಂಬಾಣಿ ಜಾತಿಗಳಿಗೆ 4.5 ಮತ್ತು ಇತರೆ ಹಕ್ಕಿಪಿಕ್ಕಿ ಜಾತಿಗಳಿಗೆ ಶೇ. 1 ಮೀಸಲಾತಿಯ ಆಯೋಗ ರಚನೆ ಮಾಡಿ ಅವಕಾಶ ಮಾಡಿಕೊಟ್ಟರು ಎಂದು ತಿಳಿಸಿದರು.

ಈ ವಿಚಾರದಲ್ಲಿ ನಮ್ಮ ಸಮುದಾಯದ ಆಶಯಗಳನ್ನು ಈಡೇರಿಸುವಂತಹ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿಜಿಯವರು ಹೈದ್ರಾ ಬಾದಿನಲ್ಲಿ ನಡೆದ ಮಾದಿಗ ಸಮಾವೇಶದಲ್ಲಿ ಪಾಲ್ಗೊಂಡು ಭರವಸೆ ಕೊಟ್ಟಿದ್ದರು. ಆದರೆ ಕರ್ನಾಟಕದಲ್ಲಿದ್ದಂತಹ ಕಾಂಗ್ರೆಸ್ ಮೀಸಲಾತಿ ಜಾರಿ ಮಾಡುವಲ್ಲಿ ವಿಳಂಬ ಮಾಡಿ ಗೊಂದಲ ಉಂಟು ಮಾಡಿದ್ದರಿಂದ ನಮ್ಮ ಸಮಾಜದ ಮುಖಂಡರುಗಳು ಸುಪ್ರೀಂ ಕೋರ್ಟಿಗೆ ಹೋಗಿದ್ದರು. ಸುಪ್ರಿಂ ಕೋರ್ಟ್‌ನ 7 ನ್ಯಾಯಾಧೀಶರ ಪೀಠವು ಆಗಸ್ಟ್ 1ನೇ ರಂದು ಒಳ ಮೀಸಲಾತಿಯನ್ನು ಜಾತಿ ಜನಸಂಖ್ಯೆಗನುಗುಣವಾಗಿ ಹಂಚಿಕೆ ಮಾಡಬಹುದೆಂದು ಐತಿಹಾಸಿಕ ತೀರ್ಪನ್ನು ನೀಡಿದ್ದು ಇದು ನಿಜಕ್ಕೂ ಮಾದಿಗ ಸಮಾಜದ ನಡೆಸಿದ ಹೋರಾಟಕ್ಕೆ ಸಿಕ್ಕ ಫಲವಾಗಿದೆ ಎಂದರು.

ದಲಿತ ಮುಖಂಡರಾದ ಹೆಚ್. ಮಲ್ಲೇಶ್, ಎಂ. ಹಾಲೇಶ್, ಶಾಮನೂರು ರಾಜು, ಜಯ ಪ್ರಕಾಶ್, ಹಾಲೇಶ್ ಜಿಗಳಿ, ಹನುಮಂತಪ್ಪ ಗಾಂಧಿನಗರ, ಅಂಜಿನಪ್ಪ, ರಾಜಪ್ಪ, ದುರ್ಗೇಶ್ ನಿಟ್ಟುವಳ್ಳಿ, ಆನಂದ ಜಾಲಿಹಾಳ್, ನಿಂಗರಾಜ್ ರೆಡ್ಡಿ, ಸಾವಜ್ಜರ್ ಮಂಜು, ಷಣ್ಮುಖ, ಸೋಮ್ಲಾಪುರ ಹನುಮಂತಪ್ಪ, ರಾಮಚಂದ್ರಪ್ಪ, ರಾಘವೇಂದ್ರ, ರವಿ ಕೆಟಿಜೆ ನಗರ, ಮಾನು, ಚೇತನ್, ಜಯಣ್ಣ ಎಸ್.ಓ.ಜಿ. ಕಾಲೋನಿ, ಚಿಕ್ಕನಹಳ್ಳಿ ಹನುಮಂತಪ್ಪ ಹಾಗೂ ಇತರರು ಪಾಲ್ಗೊಂಡಿದ್ದರು.

## ದೂಡಾ ಅಧ್ಯಕ್ಷರಿಂದ ಕುಂದು ಕೊರತೆ ಆಲಿಕೆ



ದಾವಣಗೆರೆ, ಆ. 2-ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ತಮ್ಮ ಕಚೇರಿಯಲ್ಲಿ ಇಂದು ಬೆಳಿಗ್ಗೆ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ, ತಕ್ಷಣವೇ ಅಧಿಕಾರಿಗಳ ಸಭೆ ಕರೆದು, ಎಲ್ಲಾ ಅಧಿಕಾರಿಗಳಿಗೂ ಸಾರ್ವಜನಿಕರನ್ನು ಅಲೆದಾಡಿಸದೆ ಕೂಡಲೇ ಕೆಲಸ ಮಾಡಿಕೊಡಬೇಕಾಗಿ ನಿರ್ದೇಶಿಸಿದರು. ಈ ಸಂದರ್ಭದಲ್ಲಿ ಆಯುಕ್ತರಾದ ತಿಮ್ಮೇಶ್ ಹುಲ್ಲುಮನಿ, ಪ್ರಾಧಿಕಾರದ ಸದಸ್ಯರಾದ ಎಂ. ಮಂಜುನಾಥ್, ಶ್ರೀಮತಿ ಎಂ.ಆರ್. ವಾಣಿ, ಜಬ್ಬಾರ್ ಖಾನ್ ಇನ್ನು ಮುಂತಾದವರು ಇದ್ದರು.

## ಮೌಢ್ಯತೆ ತಡೆ ಸೂಚನೆ ನೀಡುವ ಅರ್ಜಿ ತಿರಸ್ಕೃತ

ನವದೆಹಲಿ, ಆ. 2 - ಮೌಢ್ಯತೆ ಹಾಗೂ ವಾಮಾಚಾರಗಳ ನಿಗ್ರಹಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಬೇಕು ಎಂಬ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಇಂತಹ ಕ್ರಮಗಳ ಬಗ್ಗೆ ಸಂಸತ್ತು ನಿರ್ಧರಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಹೇಳಿದೆ.


## ಪ್ರೀತಾ ಅವರಿಗೆ ಡಾಕ್ಟರೇಟ್ : ಅಭಿನಂದನೆಗಳು



ದಾವಣಗೆರೆ ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಸಹ ಪ್ರಾಧ್ಯಾಪಕರಾದ **ಶ್ರೀಮತಿ ಪಿ. ಎಸ್. ಪ್ರೀತಾ ದೊಡ್ಡ ಹನುಮಂತಪ್ಪ** ಅವರು ಮಂಡಿಸಿದ **"ಆನ್ ಆಪ್ಟಿಮೈಸೇಶನ್ ಆಫ್ ಇಂಡಸ್ಟ್ರಿಯಲ್ ಎನರ್ಜಿ ಮ್ಯಾನೇಜ್ಮೆಂಟ್ ಸಿಸ್ಟಮ್ ಬೈ ಯೂಸಿಂಗ್ ಅನಿಮಲ್ ಬರ್ಡ್ ಬಿಹೇವಿಯರಲ್ ಅಪ್ರೋಚ್"** ವಿಷಯ ಕುರಿತ ಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು **ಡಾಕ್ಟರೇಟ್ ಪದವಿ** ನೀಡಿ ಗೌರವಿಸಿದೆ.
ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿದ 24ನೇ ವಾರ್ಷಿಕ ಘಟಿಕೋತ್ಸವದಲ್ಲಿ **ಉಪ ಕುಲಪತಿ ಡಾ. ಎಸ್. ವಿದ್ಯಾಶಂಕರ್** ಅವರಿಂದ ಡಾಕ್ಟರೇಟ್ ಪದವಿ ಸ್ವೀಕರಿಸಿರುವ ಆತ್ಮೀಯರಾದ **ಪ್ರೀತಾ** ಅವರಿಗೆ ಹಾರ್ದಿಕ ಅಭಿನಂದನೆಗಳು.

**ಶ್ರೀಮತಿ ವಿಜಯಶ್ರೀ ಮಹೇಂದ್ರ ಕುಮಾರ್ ಮತ್ತು ಮಕ್ಕಳು, ದಾವಣಗೆರೆ**
**ಶ್ರೀಮತಿ ಪ್ರೀತಾ ಅವರ ಪತಿ ಶ್ರೀ ಎಲ್. ಜೆ. ದೊಡ್ಡ ಹನುಮಂತಪ್ಪ ಮತ್ತು ಮಕ್ಕಳು ಹಾಗೂ ಕುಟುಂಬದವರು, ಚಿರಡೋಣಿ**

## ಸುರಭಿ ಶಿವಮೂರ್ತಿ ಸೇರಿ ಐವರು ಸದಸ್ಯರಾಗಿ ನೇಮಕ



**(1ನೇ ಪುಟದಿಂದ)** ನೇಮಕಗೊಂಡಿರುವ ಸುರಭಿ ಶಿವಮೂರ್ತಿ ಅವರು ಛಾಯಾಗ್ರಾಹಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿ, ಜಿಲ್ಲಾ ಛಾಯಾಗ್ರಾಹಕರ ಸಂಘ, ಲಯನ್ಸ್ ಕ್ಲಬ್, ಸಿನಿಮಾ ಸಿರಿ ಸೇರಿದಂತೆ, ಸಾಮಾಜಿಕ ಸಂಘಟನೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಅವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಕಾಂಗ್ರೆಸ್ ಈ ನೇಮಕ ಮಾಡಿದೆ. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರುಗಳು ಮಾಡಿದ ಶಿಫಾರಸ್ಸಿನ ಮೇರೆಗೆ ಸರ್ಕಾರ ಸುರಭಿ ಶಿವಮೂರ್ತಿ ಸೇರಿದಂತೆ, ಐವರನ್ನು ಪಾಲಿಕೆ ಸದಸ್ಯರನ್ನಾಗಿಸಿದೆ.




## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್, ಇಂದಿರಾ ನಗರ, ಕಾರ್ಲ್ ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಮಾಗನಹಳ್ಳಿ ರಸ್ತೆಯ ಫಿಶ್ ಮಾರ್ಕೆಟ್, ಜೋಗಲ್ ಬಾಬಾ ಲೇಔಟ್, ಮುಸ್ತಫಾ ನಗರ, ಮಂಡಿಪೇಟೆ ರಸ್ತೆ, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ.ರಸ್ತೆ, ಗಡಿಯಾರ ಕಂಬ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯವಾಗಲಿದೆ.

### ಭದ್ರಾ ಜಲಾಶಯ



ನೀರಿನ ಮಟ್ಟ : 182 ಅಡಿ 7 ಇಂಚು
ಒಳ ಹರಿವು : 38870 ಕ್ಯೂಸೆಕ್ಸ್
ಹೊರ ಹರಿವು : 56636 ಕ್ಯೂಸೆಕ್ಸ್
ಕಳೆದ ವರ್ಷ : 163 ಅಡಿ 3 ಇಂಚು










KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas